ಛೇರ್ಮನ್‌ರನ್ನು ಮತ್ತು ಅಲ್ಲಿರತಕ್ಕಂಥ ಹೋರಾಟ ಸಮಿತಿಯವರನ್ನು ಕರೆಸಿ ಮೀಟಿಂಗ್ ಮಾಡಿದ್ದೇವೆ. ಸುಮಾರು 670 ಜನರು ಈ ತಿಂಗಳಿನಲ್ಲೇ ಅವರು ಶಿಫ್ಟ್ ಮಾಡುತ್ತಿದ್ದಾರೆ. ಅವರಿಗೆ ಸೈಟುಗಳನ್ನು ಕೊಡುವುದಕ್ಕೆ ನಾವು ಜಮೀನನ್ನು ಅಕ್ವೈರ್ ಮಾಡಿದ್ದೇವೆ. ಅವರೆಲ್ಲರೂ ಒಪ್ಪಿಕೊಂಡಿದ್ದಾರೆ ಈ ಅಧಿವೇಶನ ಮುಗಿದ ಕೂಡಲೇ ನಾನು ಬಾಗಲಕೋಟೆಗೆ ಹೋಗಿ ಆ 670 ಜನರನ್ನು ನಾವು ಮೊದಲು ಶಿಫ್ಟ್ ಮಾಡಿಸುತ್ತೇನೆ, ನಂತರ ಫೇಸ್ಡ್ ಮ್ಯಾನರ್‌ನಲ್ಲಿ ಅವರಿಗೆ ಸೈಟ್ ಕೊಡುವಂತಾದ್ದರಲ್ಲಿ ಪ್ರಾಯಶಃ ಸೈಟ್ ಕೊಡುವಂತಾದ್ದರಲ್ಲಿ ಸ್ವಲ್ಪ ಅಳತೆಯ ಬಗ್ಗೆ ಡಿಫರೆನ್ಸ್ ಇದೆ ಅವರು ಸ್ವಲ್ಪ ಜಾಸ್ತಿ ಅಳತೆಯ ಸೈಟುಗಳು ಬೇಕು ಅಂತ ಕೇಳುತ್ತಿದ್ದಾರೆ. ನಾವು ಅವರು ಕುಳಿತು ಮಾತನಾಡೋಣ ಅಂತ ಹೋರಾಟ ಸಮಿತಿಯವರಿಗೆ ಹೇಳಿ ಕಳುಹಿಸಿದ್ದೇನೆ. ಈ ಸದನ ಮುಗಿದ ತಕ್ಷಣ ಶಾಸಕರನ್ನು ಮತ್ತು ಅವರನ್ನು ಕರೆಸಿ ನಾವೆಲ್ಲರೂ ಕುಳಿತು ಮಾತನಾಡಿ ಒಟ್ಟಾರೆ ಆ ಪ್ರದೇಶದ ಜನರಲ್ಲಿ ನಮ್ಮ ಮನವಿ ಏನೆಂದರೆ ಮಾನ್ಯ ಅಧ್ಯಕ್ಷರೇ ತಮ್ಮ ಮೂಲಕ ಯಾರು ಹಣ ತೆಗೆದುಕೊಂಡಿರುತ್ತಾರೆ ಯಾರು ಪರಿಹಾರ ಪಡೆದುಕೊಂಡಿದ್ದಾರೆ, ಪರಿಹಾರ ಪಡೆದುಕೊಂಡಿರುವವರು ದಯವಿಟ್ಟು ಆ ಸ್ಥಳವನ್ನು ಖಾಲಿ ಮಾಡಬೇಕು, ಅವರಿಗೆ ನಾವು ವ್ಯವಸ್ಥೆ ಮಾಡಿಕೊಡುತ್ತೇವೆ. ಎಷ್ಟು ಹಣ ಖರ್ಚಾದರೂ ಸಹ ನಮಗೆ ಈಗ ವರ್ಲ್ಡ್ ಬ್ಯಾಂಕ್‌ನವರು ಹಣ ಕೊಡುವುದಕ್ಕೆ ತಯಾರಾಗಿದ್ದಾರೆ. ಎಷ್ಟು ಉತ್ತಮವಾಗಿ ಮಾಡಿಕೊಡಲು ಸಾಧ್ಯವೋ ಅಷ್ಟು ಉತ್ತಮವಾಗಿ ಮಾಡಿಕೊಡುತ್ತೇವೆ ನಾವು ಈಗ 21 ಗ್ರಾಮಗಳನ್ನು ಮಾಡಿದ್ದೇವೆ. ಅವರು ಹೋಗಿ ನೋಡಿಕೊಂಡು ಬರಲಿ. ಜಿಲ್ಲಾ ಪಂಚಾಯತಿಯವರಿಗೆ ಅವರು ಹ್ಯಾಂಡ್ ಓವರ್ ಮಾಡುವಾಗ ಬಹಳ ಅತ್ಯುತ್ತಮವಾಗಿ ಮಾಡಿದ್ದಾರೆಂದು ಹೇಳಿದರು. ಅದು ಸ್ಕೂಲ್ ಇರಲಿ, ಬಿಲ್ಡಿಂಗ್‌ಗಳು ಇರಲಿ, ಚರಂಡಿ ಇರಲಿ ಸೈಟ್‌ಗಳು ಇರಲಿ, ಮನೆ ಇರಲಿ ದೇವಸ್ಥಾನಗಳು ಇರಲಿ ಪೂರ್ಣ ಪ್ರಮಾಣದಲ್ಲಿ ಪುನರ್ವಸತಿ ಕಲ್ಪಿಸಿ ನಾವು ಜಿಲ್ಲಾಪಂಚಾಯತಿಗೆ ಹ್ಯಾಂಡ್‌ಓವರ್ ಮಾಡುತ್ತಿದ್ದೇವೆ. ಆದರೆ ಪರಿಹಾರ ಪಡೆದುಕೊಂಡಿರತಕ್ಕಂಥ ಜನರು ಸ್ಥಳಾಂತರ ಮಾಡುವುದಕ್ಕೆ ಅವರ ಮನಸ್ಸು ಸಿದ್ಧತೆ ಮಾಡಿಕೊಳ್ಳಬೇಕೆಂದು ಹೇಳಿ ನಾನು ತಮ್ಮ ಮೂಲಕ ಮನವಿ ಮಾಡುತ್ತೇನೆ.

ಆ) ನಾರಾಯಣಪುರ ಎಡದಂಡೆ ಕಾಲುವೆ ಕುರಿತು.

+ ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೆಪಲ್ಲಿ):- ಮಾನ್ಯ ಅಧ್ಯಕ್ಷರೇ, ಈ ನಾರಾಯಣಪುರ ಎಡದಂಡೆ ಕಾಲುವೆಯ ಕಥೆ ಬಹಳ ದೊಡ್ಡ ಕರ್ಮಕಾಂಡವಾಗಿದೆ. ನಾನು ಈ ಬಗ್ಗೆ ಹೋದ ಸಲ ಕೂಡ ಪ್ರಸ್ತಾಪ ಮಾಡಿದ್ದೆ. ಆಗ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದರು ಆದರೆ ಇದುವರೆಗೂ ಏನೂ ಕ್ರಮ ತೆಗೆದುಕೊಂಡಿಲ್ಲ. ಈ ನಾರಾಯಣಪುರ ಎಡದಂಡೆ ಕಾಲುವೆ, 1981ನೇ ಇಸವಿಯಲ್ಲಿ ಗುಂಡೂರಾಯರ ಕಾಲದಲ್ಲಿ ಪ್ರಾರಂಭನಾಯಿತು. ಸುಮಾರು 78 ಕಿಲೋಮೀಟರ್ ಉದ್ದ ಇರತಕ್ಕಂಥ ಈ ಕಾಲುವೆ

(ಮಾನ್ಯ ಉಪಾಧ್ಯಕ್ಷರು ಪೀಠಕ್ಕೆ ಬಂದರು)

ಯಥಾಸ್ಥಿತಿ 10,000 ಕ್ಯೂಸೆಕ್ಸ್ ನೀರನ್ನು ಹರಿಯಲು ಬಿಡುವುದಕ್ಕೆ ಇರತಕ್ಕಂಥ ರೀತಿಯಲ್ಲಿ ಇದನ್ನು ಡಿಸೈನ್ ಮಾಡಿ ಕಟ್ಟಿರತಕ್ಕಂಥ ಒಂದು ಕಾಲುವೆ. ಆದರೆ ಇದುವರೆಗೂ ಕೂಡ ಯಾವುದೇ ಸಂದರ್ಭದಲ್ಲಿ 10,000 ಕ್ಯೂಸೆಕ್ಸ್ ನೀರನ್ನು ಆ ಕಾಲುವೆಯಲ್ಲಿ ಬಿಡಲೇ ಇಲ್ಲ. ಈಗ ಕೇವಲ 3,000 ಕ್ಯೂಸೆಕ್ಸ್ ನೀರನ್ನು ಮಾತ್ರ ಬಿಡುತ್ತಿದ್ದಾರೆ. 3 ಸಾವಿರ ಕ್ಯೂಸೆಕ್ಸ್ ನೀರನ್ನು ಬಿಡುತ್ತಾ ಇರತಕ್ಕಂಥ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರೇ 1990ನೇ ಇಸವಿಯಿಂದ 1996ನೇ ಇಸವಿಯವರೆಗೂ ಕೂಡ ಹಲವಾರು ಬಾರಿ ನಾಲ್ಕು ಸಲ ಒಡೆದಿದೆ. ಮತ್ತೆ ನಾಲ್ಕು ದಿವಸಗಳ ಹಿಂದೆ ಆ ಕಾಲುವೆ ಬಿರುಕು ಬಿಟ್ಟಿದೆ. 1990ನೇ ಇಸವಿಯಲ್ಲಿ ಪ್ರಥಮ ಬಾರಿಗೆ 24ನೇ ಕಿಲೋಮೀಟರ್‌ನಲ್ಲಿ ಒಡೆದಿತ್ತು. 1992ನೇ ಇಸವಿಯಲ್ಲಿ ಎರಡನೇ ಬಾರಿಗೆ 59ನೇ ಕಿಲೋಮೀಟರ್‌ನಲ್ಲಿ ಒಡೆದಿತ್ತು. 1994ನೇ ಇಸವಿಯಲ್ಲಿ 3ನೇ ಬಾರಿಗೆ 65ನೇ ಕಿಲೋಮೀಟರ್‌ನಲ್ಲಿ ಒಡೆದಿತ್ತು. 1996ರಲ್ಲಿ ನಾಲ್ಕನೇ ಬಾರಿಗೆ 48 ಮತ್ತು 47ನೇ ಕಿಲೋಮೀಟರ್‌ನಲ್ಲಿ ಒಡೆದಿತ್ತು. ಮಾನ್ಯ ಅಧ್ಯಕ್ಷರೇ, ನಾನು ಕಳೆದ ಭಾನುವಾರ ನಾರಾಯಣ ಪುರ ಎಡದಂಡೆ ಕಾಲುವೆಗೆ ಹೋಗಿ ಇಡೀ 78 ಕಿಲೋಮೀಟರ್ ಉದ್ದಕ್ಕೂ ನಾನು ಹೋಗಿ ನೋಡಿಕೊಂಡು ಬಂದಿದ್ದೇನೆ. ಅದಕ್ಕೆ ಸಂಬಂಧಪಟ್ಟವರ ಜೊತೆಯಲ್ಲಿ ಹೋಗಿ ನೋಡಿಕೊಂಡು ಬಂದಿದ್ದೇವೆ. ಎಷ್ಟು ಭೀಕರವಾಗಿದೆ ಪರಿಸ್ಥಿತಿ ಅಂತ ಹೇಳಿದರೆ ಅದರ ಕೆಪ್ಯಾಸಿಟಿ ಇರತಕ್ಕಂಥಾದ್ದು 10,000 ಕ್ಯೂಸೆಕ್ಸ್ ನೀರು ಹೋಗಲಿಕ್ಕೆ 78 ಕಿಲೋಮೀಟರ್ ದೂರ. ಇನ್ನೂ ಬ್ರಾಂಚ್ ಕೆನಾಲ್ಸ್ ಆಗಿಲ್ಲ. ಕ್ಯಾನಾಲ್ಸ್ ಎಲ್ಲಾ ಪೂರ್ತಿ ಆದರೆ 10,000 ಕ್ಯೂಸೆಕ್ಸ್ ನೀರನ್ನು ಬಿಡಬೇಕಾಗುತ್ತದೆ. 10,000 ಕ್ಯೂಸೆಕ್ಸ್ ನೀರನ್ನು ಬಿಟ್ಟರೆ ಒಂದು ದಿವಸ ಕೂಡ ಆ ಕಾಲುವೆ ಇರತಕ್ಕಂಥ ಪರಿಸ್ಥಿತಿ ಇಲ್ಲ. ಅಷ್ಟು ದುಸ್ಥಿತಿಗೆ ಬಂದಿದೆ. ಏಕೆ ಆ ದುಸ್ಥಿತಿಗೆ ಬಂದಿದೆ ಅಂತ ಹೇಳಿದರೆ ಇದನ್ನು ತನಿಖೆ ಮಾಡಲಿಕ್ಕೆ ಅಂತ ಹೇಳಿ ಹಿಂದೆಯೇ ಎಕ್ಸ್‌ಪರ್ಟ್ ಕಮಿಟಿ ಅಂತ ಮಾಡಿತ್ತು. ಅವರು ಒಂದು ವರದಿ ಕೊಟ್ಟಂತಹ ಸಂದರ್ಭದಲ್ಲಿ ಅವರು ತಮ್ಮ ವರದಿಯಲ್ಲಿ ಏನು ಶಿಫಾರಸ್ಸು ಕೊಟ್ಟಿದ್ದಾರೆ ಸರ್ಕಾರಕ್ಕೆ ಅಂದರೆ ಆ ಕಾಲುವೆ ಡಿಸೈನ್ ಮಾಡಿರತಕ್ಕಂಥಾದ್ದೇ ಸರಿ ಇಲ್ಲ. ಆ ಕಾಲುವೆಯಲ್ಲಿ 10 ಸಾವಿರ ಕ್ಯೂಸೆಕ್ಸ್ ನೀರು ಬಿಟ್ಟರೆ ಆ ಕಾಲುವೆ ಉಳಿಯುವುದಕ್ಕೆ ಸಾಧ್ಯವಿಲ್ಲ. ಯಾವ ರೀತಿ ಬಿರುಕು ಬಿಟ್ಟಿದೆ ಅಂತ ಹೇಳಿದರೆ ಅಲ್ಲಿ ಸರ್ವೀಸ್ ಲೈನ್ ಎಂದು ಇದೆ.

12.20 ಪಿ.ಎಂ

ಆ ಸರ್ವೀಸ್ ಲೈನ್ ಎಲ್ಲಾ ಕುಸಿದು ಸಿಂಕ್ ಆಗುತ್ತಿದೆ. ಸಿಂಕ್ ಆಗುವುದರಿಂದ ಸೀಪೇಜ್ ಆಗುವುದಕ್ಕೆ ಕಾರಣವಾಗಿದೆ. ಎಸ್ಟಿಮೇಟ್ ಪ್ರಕಾರ ಕಾಲುವೆಯನ್ನು ಕಟ್ಟದೆ ಇರುವುದರಿಂದ ಸಿಂಕ್ ಆಗಲು ಕಾರಣವಾಗಿದೆ. ಜೊತೆಗೆ ಕಟ್ಟಿರತಕ್ಕಂಥ ಕಾಲುವೆಗೆ ಸ್ಟ್ರೆಂಗ್ತ್ ಇಲ್ಲದೇ ಇರುವ ಕಾರಣ ಇದೆಲ್ಲ ಆಗುತ್ತಿದೆ. ಸರ್ವೀಸ್ ಲೈನ್ ಒಳಗಡೆಯೆಲ್ಲಾ ಸಂಪೂರ್ಣ ಲೂಸ್ ಸಾಯಿಲ್ (ಬಿ.ಸಿ. ಸಾಯಿಲ್) ಹಾಕಬೇಕು. ಬಿ.ಸಿ.ಸಾಯಿಲ್ ಹಾಕುವಾಗ 6 ಇಂಚಿಗೆ ಒಂದು ಸಾರಿ ರೋಲರ್ ಹಾಕಿ ಕಾಲುವೆ ಮಾಡಬೇಕಾಗುತ್ತದೆ. ಅದು ಬಿಟ್ಟು ಒಂದು ಮೀಟರ್ ಎರಡು ಮೀಟರ್‌ಗೆ ಒಂದು ಸಾರಿ ರೋಲರ್ ಹಾಕಿ ಮಾಡಿರುವುದರಿಂದ ಅದು ಲೂಸ್ ಆಗಿ ಇಡೀ ಆ ಸರ್ವೀಸ್ ಲೈನ್ ಕುಸಿಯುತ್ತಿದೆ.

ಈಗಾಗಲೇ ಅದು ಆರು ಸಲ ಕುಸಿದಿದೆ. ಲಾಸ್ಟ್ ವೀಕ್ ನಾನು ಅಲ್ಲಿಗೆ ಹೋಗಿ ಬಂದಿದ್ದೇನೆ. ನಾನು ಹೋಗಿ ಬಂದ ಮೇಲೆ ಮೊನ್ನೆ ಮೂರು ದಿವಸಗಳ ಹಿಂದೆ ಕಾಲುವೆಯ 67.9 ಕಿಲೋಮೀಟರ್‌ನಲ್ಲಿ ಮತ್ತೆ ಒಡೆದಿದೆಯೆಂದು ತಿಳಿದು ಬಂದಿದೆ. ಈ ಕಾಲುವೆಯು ಒಡೆದಿರುವುದರಿಂದ ನೀರು ಬಿಡುವುದನ್ನು ನಿಲ್ಲಿಸಿದ್ದಾರೆ. ನೀರು ನಿಲ್ಲಿಸಿರುವುದರಿಂದ ಒಟ್ಟು 4 ಲಕ್ಷದ 34 ಸಾವಿರ ಹೆಕ್ಟೇರ್ ಭೂಮಿಯಲ್ಲಿ ಬೆಳೆದಿರುವ ಬೆಳೆಗೆ ನೀರು ಇಲ್ಲದಂತಾಗಿ ಬೆಳೆಯು ಒಣಗುವ ಪರಿಸ್ಥಿತಿ ಬಂದಿದೆ. ಸುರುಪುರ, ಜೇವರ್ಗಿ, ಶಹಪುರ ತಾಲ್ಲೂಕುಗಳ ರೈತರುಗಳು ಮಾಡಿರತಕ್ಕಂಥ ಕೃಷಿ ಬೆಳೆಗೆ ನೀರು ಸಿಗದೆ ಇರುವುದರಿಂದ ಸಂಪೂರ್ಣ ನಾಶವಾಗತಕ್ಕಂಥ ಪರಿಸ್ಥಿತಿ ಬಂದಿದೆ. ಇಷ್ಟಾಗಿದ್ದರೂ ಆ ಕಾಲುವೆಯನ್ನು ಸ್ಟ್ರೆಂಗ್ತನ್ ಮಾಡುವ ಪ್ರಯತ್ನ ಮಾಡಿಲ್ಲ. ಆ ಕಾಲುವೆಯಲ್ಲಿ ಹೂಳು ಎತ್ತುವುದಕ್ಕೆಂದು 1991ನೇ ಇಸವಿಯಲ್ಲಿ 39 ಕೋಟಿ ರೂಪಾಯಿಗಳ ಒಂದು ಅಂದಾಜನ್ನು ಅಧಿಕಾರಿಗಳು ಮಾಡಿದ್ದಾರೆ. ಹೂಳು ಎತ್ತುವುದು ಎಂದರೆ ಅಧಿಕಾರಿಗಳಿಗೆ ಬಹಳ ಸುಲಭವಾಗಿ ದುಡ್ಡು ಬರತಕ್ಕಂಥ ಕೆಲಸ. ಆಮೇಲೆ, 1995-96ರಲ್ಲಿ ಕೆಲವು ಕಾಲುವೆಗಳಲ್ಲಿ ಅಲ್ಪ ಸ್ವಲ್ಪ ಶಿಲ್ಟ್‌ನ್ನು ತೆಗೆಯುವುದಕ್ಕಾಗಿ 18 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. 1996-97ರಲ್ಲಿ ಕಾಲುವೆಗಳಲ್ಲಿ ಶಿಲ್ಟ್ ತೆಗೆಯುವುದಕ್ಕೆ ಮತ್ತು ಸಣ್ಣ ಪುಟ್ಟ ರಿಪೇರಿಗೆಂದು 21 ಕೋಟಿ ರೂಪಾಯಿಗಳ ಅಂದಾಜು ಪಟ್ಟಿಯನ್ನು ತಯಾರು ಮಾಡಿದ್ದಾರೆ. ಈ ಅಂದಾಜು ವೆಚ್ಚದಿಂದ ಹಿಂದೆ ಮಾಡಿದ ಕೆಲಸಗಳಿಗೆ ಬಿಲ್ ತಯಾರು ಮಾಡಿದ್ದಾರೆ, ಅದರಲ್ಲಿ ಮಾಲಗತ್ತಿ ನಿರ್ವಹಣಾ ಮತ್ತು ಪೋಷಣೆ ವಿಭಾಗದಲ್ಲಿ 2 ಕೋಟಿ ರೂಪಾಯಿಗಳಿಗೆ ಬಿಲ್, ವನದುರ್ಗ ನಿರ್ವಹಣಾ ವಿಭಾಗದಲ್ಲಿ 3 ಕೋಟಿ ರೂಪಾಯಿಗಳಿಗೆ ಬಿಲ್, ಹಸನಾಪುರ ಉಪ ವಿಭಾಗ ನಿರ್ವಹಣಾ ವಿಭಾಗದಲ್ಲಿ 3 ಕೋಟಿ 80 ಲಕ್ಷ ರೂಪಾಯಿಗಳಿಗೆ ಬಿಲ್, ಹತ್ತಿಗೂಡು ನಿರ್ವಹಣಾ ವಿಭಾಗದಲ್ಲಿ 3 ಕೋಟಿ ರೂಪಾಯಿಗಳಿಗೆ ಬಿಲ್, ಕೃಷ್ಣಾಪುರ ನಿರ್ವಹಣಾ ಉಪ ವಿಭಾಗದಲ್ಲಿ ಒಂದು ಕೋಟಿ ರೂಪಾಯಿಗಳಿಗೆ ಬಿಲ್, ತೋರಣಹಳ್ಳಿ ನಿರ್ವಹಣಾ ವಿಭಾಗದಲ್ಲಿ 2 ಕೋಟಿ 80 ಲಕ್ಷ ರೂಪಾಯಿಗಳಿಗೆ ಬಿಲ್ ಮಾಡಿ ಅದನ್ನು 31ನೇ ತಾರೀಖಿನೊಳಗೆ ಒಬ್ಬ ಅಧಿಕಾರಿ ರಿಟೈರ್ಡ್ ಆಗುವುದರೊಳಗೆ ಅದನ್ನು ಡ್ರಾ ಮಾಡಿಕೊಳ್ಳಬೇಕೆಂದು ಪಟ್ಟಿ ಮಾಡಿದ್ದರು. ಆ ವಿಷಯದ ಬಗ್ಗೆ ನಾನು ಮಂತ್ರಿಗಳ ಗಮನಕ್ಕೆ ತಂದಿದ್ದೆ. ಆದರೆ, ಅದರ ಬಗ್ಗೆ ಅವರು ಏನು ಕ್ರಮ ತೆಗೆದುಕೊಂಡರೆಂದು ನನಗೆ ಗೊತ್ತಾಗಲಿಲ್ಲ. ಈ ನಾರಾಯಾಣಪುರ ಎಡ ದಂಡೆ ಕಾಲುವೆಯಲ್ಲಿ 10,000 ಕ್ಯೂಸೆಕ್ಸ್ ನೀರು ಬಿಡುವ ಯೋಜನೆಯಿದ್ದರೂ ಆ ಪ್ರಮಾಣದಲ್ಲಿ ನೀರು ಬಿಡಲು ಸಾಧ್ಯವಿಲ್ಲ. ಒಂದು ಪಕ್ಷ ಬಿಟ್ಟರೂ ಆ ಕಾಲುವೆ ಒಡೆದು ಸುಮಾರು ಹಳ್ಳಿಗಳು ಮತ್ತು ವ್ಯವಸಾಯ ಭೂಮಿ ಕೊಚ್ಚಿಕೊಂಡು ಹೋಗತಕ್ಕಂಥ ಪರಿಸ್ಥಿತಿ ಉಂಟಾಗುತ್ತದೆ. ಈ ಕಾಲುವೆಯ ಡಿಸೈನ್ ಸರಿಯಿಲ್ಲವೆಂದು ತಜ್ಞರ ಸಮಿತಿಯ ವರದಿಯಲ್ಲೂ ಸಹಾ ಹೇಳಲಾಗಿದೆ. ಇನ್ನೊಂದು ಕಡೆ ಈ 78 ಕಿಲೋಮೀಟರ್ ಕಾಲುವೆಯ ಉದ್ದಕ್ಕೂ ಸೀಪೇಜ್ ಆಗುತ್ತಿದೆ. ಸೀಪೇಜ್ ಯಾವ ರೀತಿಯಾಗುತ್ತಿದೆಂದು ನಾನು ಅಲ್ಲಿಗೆ ಹೋಗಿದ್ದಾಗ ಪರೀಕ್ಷೆ ಮಾಡಿದ್ದೇನೆ. ಕೆಲವು ಕಡೆ ಸಿ.ಡಿ. ಮಾಡಿ ಅದರ ಮೇಲೆ ಚಾನಲ್ಸ್‌ನ್ನು ಕಟ್ಟಿದ್ದಾರೆ. ಆ ಸಿ.ಡಿ. ಯಾವ ತರಹ ಇದೆ ಎಂದರೆ, ಯಾರಾದರೂ ಅದರ ಕೆಳಗಡೆ ಹೋಗಿ ಕೈ ಇಟ್ಟರೆ

ಕಾಂಕ್ರೀಟು–ಸೀಮೆಂಟ್ ಎಲ್ಲಾ ಕೈಗೇ ಬಂದುಬಿಡುತ್ತದೆ. ಇದು ಯಾವ ಪರಿಸ್ಥಿತಿಯಲ್ಲಿ ಇರಬಹುದೆಂದು ತಾವೇ ಆಲೋಚನೆ ಮಾಡಿ. ಇದರ ಬಗ್ಗೆ 'ನಾರಾಯಣಪುರ ಎಡ ದಂಡೆ ಕಾಲುವೆಯ ಕರ್ಮ ಕಾಂಡ' ಎಂದು ನಾನು ಏಕೆ ಹೇಳುತ್ತಿದೇನೆಂದರೆ? ಈ ಯೋಜನೆಯಿಂದ 20 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿ ಮಾಡಬೇಕೆನ್ನುವ ರೀತಿಯಲ್ಲಿ ಅದನ್ನು ಕನ್‌ಸ್ಟ್ರಕ್ಟ್ ಮಾಡಲಾಗಿದೆ. 20 ಲಕ್ಷ ಹೆಕ್ಟೇರ್ ಭೂಮಿಗೆ ನೀರು ಕೊಡಬೇಕಾದರೆ ಈ ಕಾಲುವೆ ಮೂಲಕ 10,000 ಕ್ಯೂಸೆಕ್ಸ್ ನೀರು ಬಿಡಬೇಕಾಗುತ್ತದೆ. ಸಧ್ಯಕ್ಕೆ 3000 ಕ್ಯೂಸೆಕ್ಸ್ ನೀರನ್ನು ಬಿಡುತ್ತಿರುವಾಗಲೇ ಆ ಕಾಲುವೆಯು ಈ ದುಸ್ಥಿತಿಗೆ ಬಂದಿರುವಾಗ ಇನ್ನು 10,000 ಕ್ಯೂಸೆಕ್ಸ್ ನೀರನ್ನು ಬಿಟ್ಟಾಗ ಈ ಕಾಲುವೆ ಗತಿ ಏನಾಗಬಹುದು? ಈ ವಿಷಯದ ಬಗ್ಗೆ ಚರ್ಚೆ ಮಾಡಲು ನಿಲುವಳಿ ಸೂಚನೆಗೆ ಅನುಮತಿ ಕೊಡಬೇಕೆಂದು ತಮ್ಮನ್ನು ಕೇಳಿದ್ದೇನೆ. ತಾವು ಚರ್ಚೆಗೆ ಅನುಮತಿ ಕೊಟ್ಟರೆ, ಯಾವ ಯಾವ ರೀತಿಯಲ್ಲಿ ದುರುಪಯೋಗ ಮಾಡುತ್ತಿದ್ದಾರೆಂಬ ಬಗ್ಗೆ ಸಾಕಷ್ಟು ವಿವರಗಳು ನನ್ನ ಹತ್ತಿರ ಇವೆ, ಯಂತ್ರಗಳನ್ನು ಯಾವ ರೀತಿ ದುರುಪಯೋಗ ಮಾಡಲಾಗುತ್ತಿದೆ? ಕಾಲುವೆಗಳನ್ನು ಯಾವ ರೀತಿ ತೋಡಲಾಗುತ್ತಿದೆ ಎಂಬ ಬಗ್ಗೆ ಪೂರ್ಣ ವಿವರಗಳನ್ನು ನಾನು ಚರ್ಚೆಯ ಸಂದರ್ಭದಲ್ಲಿ ಕೊಡುತ್ತೇನೆ. ಇದು ಬಹಳ ಗಂಭೀರವಾದ ವಿಷಯವಾಗಿದೆ. ಇಡೀ ಕರ್ನಾಟಕ ರಾಜ್ಯದಲ್ಲಿ ನೀರಾವರಿ ಇಲಾಖೆ ಪ್ರಯಾರಿಟಿ ಸೆಕ್ಟಾರ್ ಆಗಿದೆ. ಸಾಲ ಮಾಡಿ ತೆಗೆದುಕೊಂಡು ಹೋಗಿ ಅಲ್ಲಿ ಹಾಕಿದ ಹಣ ದುರುಪಯೋಗವಾಗುತ್ತಿದೆ. ಗುಲ್ಬರ್ಗಾ, ರಾಯಚೂರು ಭಾಗಗಳಲ್ಲಿನ ರೈತರುಗಳಿಗೆ ಈ ಯೋಜನೆಯಿಂದ ಯಾವುದೇ ರೀತಿಯ ಪ್ರಯೋಜನವಾಗದ ಪರಿಸ್ಥಿತಿಗೆ ಅದು ಬಂದಿದೆ. ಈ ಕಾಲುವೆಯಲ್ಲಿ ನೀರು ಬಿಡುವುದಕ್ಕೆ ಸಾಧ್ಯವಿಲ್ಲದೇ ಇರುವುದರಿಂದ ಸುಮಾರು 4 ಸಾವಿರ ಹೆಕ್ಟೇರ್ ಭೂಮಿಯಲ್ಲಿ ಬೆಳೆದು ನಿಂತಿರುವ ಬೆಳೆಗೆ ಗಂಡಾಂತರಕಾರಿಯಾಗಿದೆ. ಇದೇ ಪರಿಸ್ಥಿತಿ ಮುಂದುವರಿದರೆ ಅಲ್ಲಿನ ರೈತರುಗಳು ದಂಗೆ ಏಳುತ್ತಾರೆ. ಇದೇ ವಿಷಯದ ಬಗ್ಗೆ ಹೋದ ಸಾರಿ ಪ್ರಸ್ತಾಪ ಮಾಡಿದಂಥ ಸಂದರ್ಭದಲ್ಲಿ ಇದರ ಬಗ್ಗೆ ವಿಚಾರ ಮಾಡಲು ಎಕ್ಸ್‌ಪರ್ಟ್ ಕಮಿಟಿಯನ್ನು ನೇಮಕ ಮಾಡಲಾಗುತ್ತದೆಂದು ಮಾನ್ಯ ನೀರಾವರಿ ಸಚಿವರು ಹೇಳಿದ್ದರು. ಆದರೆ, ಇದುವರೆಗೆ ಆ ಎಕ್ಸ್‌ಪರ್ಟ್ ಕಮಿಟಿಯನ್ನು ಮಾಡಲಾಗಿಲ್ಲ. ಇದಕ್ಕೂ ಮೊದಲು ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ನೇಮಕ ಮಾಡಲಾಗಿದ್ದು, ಆ ಕಮಿಟಿಯವರು ಒಂದು ವರದಿಯನ್ನು ಕೊಟ್ಟಿದ್ದಾರೆ, ಆ ವರದಿ ಸರ್ಕಾರದ ಗಮನಕ್ಕೆ ಬಂದಿದೆಯೋ ಅಥವಾ ಇಲ್ಲವೋ ಗೊತ್ತಿಲ್ಲ. ಸರ್ಕಾರದ ಗಮನಕ್ಕೆ ಆ ವರದಿಯ ಅಂಶಗಳು ಬಂದಿದ್ದರೆ ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ? ಅವರು ಕೊಟ್ಟಿರುವ ವರದಿ ಪ್ರಕಾರ ಆ ಕೆನಾಲ್ ಡಿಸೈನ್ ಮಾಡಿರುವುದರಲ್ಲೇ ತಪ್ಪಿದೆ; ಆ ಕಾಲುವೆ ಉಳಿಯುವುದಿಲ್ಲವೆಂದು ಅವರು ಹೇಳಿರುವ ಅಂಶ ನನ್ನ ಗಮನಕ್ಕೆ ಬಂದಿದೆ. ಆದುದರಿಂದ, ಇದರ ಬಗ್ಗೆ ಸರ್ಕಾರದ ನಿಲುವು ಏನು ಎಂದು ಹೇಳಬೇಕು. ಈ ವಿಷಯ ಬಹಳ ಗಂಭೀರವಾಗಿರುವುದರಿಂದ ಇದರ ಬಗ್ಗೆ ಪೂರ್ಣ ಚರ್ಚೆ ಮಾಡಲು ಈ ನಿಲುವಳಿ ಸೂಚನೆಗೆ ಅಂಗೀಕಾರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠ್ಕಲ್):- ಸನ್ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಶ್ರೀಮಾನ್ ಶ್ರೀರಾಮರೆಡ್ಡಿಯವರು ಪ್ರಸ್ತಾಪ ಮಾಡಿದ ಹಾಗೆ, ಇದು ಹೊಸ ಕೆನಾಲ್ ಏನಲ್ಲ. ಸುಮಾರು 8 ವರ್ಷಗಳ ಹಿಂದೆ ಈ ಕೆನಾಲನ್ನು ತಯಾರು ಮಾಡಲಾಗಿದೆ, ಇದು ಪದೇ ಪದೇ ಬ್ರೀಚ್ ಆಗುತ್ತಿದೆ ಎನ್ನುವ ಬಗ್ಗೆ ವಿವರವಾಗಿ ಡೇಟ್ ವೈಸ್ ಮಾನ್ಯ ಸದಸ್ಯರು ಹೇಳಿದ್ದಾರೆ. ಸುಮಾರು ಎರಡು ವರ್ಷಗಳ ಹಿಂದೆ ಈ ಕೆನಾಲ್ ಬ್ರೀಚ್ ಆದಾಗ ನಾನು ಖುದ್ದಾಗಿ ಹೋಗಿ ನೋಡಿಕೊಂಡು ಬಂದು ಸಂಬಂಧಪಟ್ಟ ಇಲಾಖೆ ಮುಖ್ಯಾಧಿಕಾರಿಗಳಿಗೆ ಪತ್ರ ಕೂಡ ಬರೆದಿದ್ದೇನೆ. ಇದನ್ನು ಸರಿಪಡಿಸಲಾಗುತ್ತದೆಂದು ಸಹಾ ನಮಗೆ ಉತ್ತರ ಬಂದಿದೆ. 78 ಕಿ.ಮೀ. ಉದ್ದವಿರುವ ನಾರಾಯಣಪುರ ಎಡದಂಡೆ ಕಾಲುವೆಯಲ್ಲಿ ಪ್ರತಿ ಸಾರಿಯೂ ಬ್ರೀಚ್ ಆಗುತ್ತಿಲೇ ಇದೆ. ಇದಕ್ಕೆ ಕಾರಣ ಏನು? ಲೋ ಕ್ವಾಲಿಟಿ ವರ್ಕ್ ಮಾಡಿರುವುದರಿಂದಲೇ ಈ ಬ್ರೀಚ್‌ಗೆ ಕಾರಣವೆಂದು ನಾವು ಹೇಳಬಹುದು. ಇಲಾಖೆಯ ಕ್ವಾಲಿಟಿ ಕಂಟ್ರೋಲ್ ಡಿಪಾರ್ಟ್‌ಮೆಂಟ್ ಕಣ್ಣಲ್ಲಿ ಕಣ್ಣಿಟ್ಟು ಕೆಲಸ ಮಾಡದೇ ಇದ್ದಾಗ, ಈ ಲೋಪದೋಷಕ್ಕೆ ಕಾರಣವಾಗುತ್ತಿದೆ. ಆದಕ್ಕಾಗಿ ಕ್ವಾಲಿಟಿ ಕಂಟ್ರೋಲ್ ಡಿಪಾರ್ಟ್‌ಮೆಂಟ್‌ನ್ನು ಬಿಗಿ ಮಾಡತಕ್ಕಂಥಾದ್ದು ಬಹಳ ಮುಖ್ಯ. ಕ್ವಾಲಿಟಿ ಕಂಟ್ರೋಲ್ ಡಿಪಾರ್ಟ್‌ಮೆಂಟ್‌ನ್ನು ಬಿಗಿ ಮಾಡದೇ ಹೋದರೆ ಯಾವ ಕಂಟ್ರಾಕ್ಟ್‌ದಾರನೂ ಸರಿಯಾಗಿ ಕೆಲಸ ಮಾಡುವುದಿಲ್ಲ. ಯಾವುದೇ ಒಬ್ಬ ಇಂಜಿನೀಯರ್ ಇನ್ನು 6 ತಿಂಗಳಲ್ಲಿ ಅಥವಾ ಒಂದು ವರ್ಷದಲ್ಲಿ ರಿಟೈರ್ಡ್ ಆಗುತ್ತಾನೆ ಎನ್ನುವಾಗ ಅಂಥವರನ್ನು ಆ ಜಾಗದಲ್ಲಿ ಹಾಕಬೇಡಿ. ರಿಟೈರ್ಡ್ ಆಗಿ ಹೋಗತಕ್ಕಂಥ ಸಮಯದಲ್ಲಿ ದುಡ್ಡು ತೆಗೆದುಕೊಂಡು ಕೆಲಸ ಕೊಡುತ್ತಾನೆ, ಎಲ್ಲಾ ಎನ್‌ಹ್ಯಾನ್ಸ್‌ಮೆಂಟ್ ಮಾಡಿ ತನ್ನ ಹಣವನ್ನು ತೆಗೆದುಕೊಂಡು ರಿಟೈರ್ಡ್ ಆಗಿ ಹೋಗುತ್ತಾನೆ. ಆವಾಗ ನಾವು ನೀವು ಏನೂ ಮಾಡುವ ಹಾಗಿಲ್ಲ. ಅಕೌಂಟೆಂಟ್ ಜನರಲ್ ಆಫೀಸಿನವರು ಬರೆದರೂ ಕೂಡ ಕೊನೆಯಲ್ಲಿ ಪಿಎಸಿಯ ಎದುರು ಈ ವಿಷಯ ಬಂದಾಗ, ಈ ಅಧಿಕಾರಿ ನಿವೃತ್ತನಾಗಿದ್ದಾನೆ. ಅವರಿಂದ ರಿಕವರಿ ಮಾಡುವುದು ಬೇಡ ಎಂದು ನೀವು ಹೇಳುತ್ತೇವೆ. ಇಂಥ ಒಂದು ಪರಿಸ್ಥಿತಿಯು ಇವ್ಹೊತ್ತು ಆಗಿದೆ. ಅಲ್ಲಿ ಹೀಗೆ ಕಂಟಿನ್ಯೂವಸ್ ಆಗಿ ಬ್ರೀಚ್ ಏಕೆ ಆಗುತ್ತದೆ ಅಂದರೆ ಅದಕ್ಕೆ ಒಂದು ಕಾರಣವಿದೆ. ಆಗಸ್ಟ್ 2 ರಂದು ರೀಸೆಂಟ್ಲೀ ಇದು ಬ್ರೀಚ್ ಆಗಿರತಕ್ಕಂಥಾದ್ದು.

> 'The breach that occurred on August 2 at the main concrete pipe at 67.3 km. site near Mudunur village in Shapur taluk has sent alarming signal on the very durability of the 80 year old dam. The canal has been designed to flow 10,000 cusecs of water but the canal has become so weak that it could not bear even small discharge of 3000 cusecs.,' . .

ಅಂದರೆ 10,000 ಕ್ಯೂಸೆಕ್ಸ್ ನೀರನ್ನು ಹರಿಸಬೇಕೆಂದು ಹೇಳಿ, ಕೆನಾಲ್ ಮಾಡಿದ್ದರು. ಅದೇ ಕೆನಾಲ್‌ನಲ್ಲಿ ಮೂರು ಸಾವಿರ ಕ್ಯೂಸೆಕ್ಸ್ ನೀರನ್ನು ಬಿಟ್ಟರೂ ಕೂಡ ಅದನ್ನು ತಡೆದುಕೊಳ್ಳುವ ಶಕ್ತಿ

ಅದಕ್ಕೆ ಇಲ್ಲ. ಹಾಗಾದರೆ ಅದನ್ನು ಕ್ವಾಲಿಟಿ ಕಂಟ್ರೋಲ್‌ನವರು ಯಾವ ರೀತಿಯಾಗಿ ಅಪ್ರೂವ್ ಮಾಡಿದರು? ಹೇಗೆ ಬಿಲ್ ಕೊಟ್ಟರು? ಈ ಡಿಸೈನ್ ಮಾಡಿದಂಥವರು ಯಾರು? ಇವೆಲ್ಲವನ್ನೂ ತಾವು ಇನ್‌ವೆಸ್ಟಿಗೇಶನ್ ಮಾಡಬೇಕಾಗುತ್ತದೆ. ವಿಚಾರಣೆಗೆ ಸದನಸಮಿತಿಯನ್ನು ಮಾಡಲು ಆಗಿಲ್ಲವಾದರೆ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನಾದರೂ ಮಾಡಿ. ಕೆ.ಸಿ. ರೆಡ್ಡಿಯವರ ನೇತೃತ್ವದಲ್ಲಾಗಲೀ ಅಥವಾ ನೀರಾವರಿಯ ತಜ್ಞರು ಯಾರಿದ್ದಾರೆಂದು ನೋಡಿ ಅವರ ನೇತೃತ್ವದ ಒಂದು ವಿಚಾರಣಾ ಸಮಿತಿಯನ್ನು ಮಾಡಿ. ತಾವು ಎಂಟೈಯರ್ 78 ಕಿ.ಮೀ. ನಲ್ಲಿ ಎಲ್ಲೆಲ್ಲಿ ಬ್ರೀಚ್ ಆಗುತ್ತಾ ಇದೆ, ಅದಕ್ಕೆ ಕಾರಣ ಏನು ಹಾಗೂ ಅದಕ್ಕೆ ಹಣವನ್ನು ಎಷ್ಟು ತೆಗೆದುಕೊಂಡಿದ್ದಾರೆ? ಏಕೆಂದರೆ ಪ್ರತಿಸಲವೂ ಅಲ್ಲಿ ಬ್ರೀಚ್ ಆಗುವುದು, ಇವರು ಹೋಗಿ ಫಿಲ್‌ಅಪ್ ಮಾಡುವುದು ಆಗುತ್ತಾ ಇದೆ. ಅದಕ್ಕೆ ಬೇಕಾದಂಥ ಮುರಂ ಅಥವಾ ಸ್ಪೆಶಲ್– ಕ್ವಾಲಿಟಿ ಮಣ್ಣು ಏನು ಬೇಕು ಅದನ್ನು ಸೂಕ್ತವಾದ ಕ್ವಾರಿಯಿಂದ ತಂದ ಹಾಗಿಲ್ಲ. ಇವರು ಕ್ವಾರಿ ತೋರಿಸುವುದೇ ಒಂದು, ಮಣ್ಣು ಹೊಡೆಯುವುದೇ ಒಂದು. ಅಲ್ಲಿರತಕ್ಕಂಥ ಕರಿಮಣ್ಣನ್ನು ಹೊಡೆಯುವುದು ಅಥವಾ ತಮಗೆ ಬೇಕಾದ ಒಂದು ಸ್ಥಳವನ್ನು ತಾವೇ ಆಯ್ಕೆಮಾಡಿಕೊಂಡು ಇಂಜಿನೀಯರ್ಸ್ ಮತ್ತು ಇವರು ಇಬ್ಬರೂ ಒಂದಾಗಿ ಆಂಥ ಮಣ್ಣು [illegible] ಕೆನಾಲ್ ನಿರ್ಮಾಣ ಮಾಡತಕ್ಕಂಥ ಕೆಲಸವನ್ನು ಮಾಡುತ್ತಾರೆ. ಆದುದರಿಂದಾಗಿ ಇವ್ಯಾತ್ತ ಪದೇ ಪದೇ ಬ್ರೀಚ್ ಆಗತಕ್ಕಂಥಾದ್ದು ಆಗುತ್ತಿದೆ. ಮೊನ್ನೆ ತಾವುಗಳು ತುಂಗಭದ್ರಾಕ್ಕೆ ಹೋಗಿದ್ದಿರಿ, ತುಂಗಭದ್ರಾ ಲೆಫ್ಟ್‌ಬ್ಯಾಂಕ್ ಕೆನಾಲ್‌ನಲ್ಲಿ ಕೆಲಸ ಪ್ರಾರಂಭವಾಗಿದೆ, ನೀರು ಬಿಡಲು ನೀವು ಪ್ರಾರಂಭ ಮಾಡಿದ್ದೀರಿ. ಈಗ ಮತ್ತೆ ಅಲ್ಲಿ ನೀರು ಬ್ರೀಚ್ ಆಗಿದೆ. ಏಕೆ? ಇಲ್ಲಿ ಆದೇ ಕ್ವಾಲಿಟಿ ಕಂಟ್ರೋಲ್‌ನ ವಿಚಾರ ಬರುತ್ತದೆ. ಯಾವ ಕ್ವಾಲಿಟಿ ಕಂಟ್ರೋಲ್ ಮಾಡಿ ಅಲ್ಲಿ ಮುರಂ, ಮಣ್ಣನ್ನು ಉಪಯೋಗ ಮಾಡಬೇಕಾಗಿತ್ತು, ಕೆಂಪು ಮಣ್ಣಾಗಲೀ ಮೊದಲು ಹಾಕಿ ಮಾಡಬೇಕಾಗಿತ್ತು. ಆ ಮೇಲೆ ಬಿ.ಸಿ. ಸಾಯಿಲ್ ಹಾಕಿ, ಪುನಃ ಅದರ ಮೇಲೆ ಮುರಂ ಹಾಕಿ ಅದರ ಮೇಲೆ ಎಷ್ಟು ಹೊತ್ತು ರೋಲರ್ ತಿರುಗಿಸಬೇಕು, ಎಷ್ಟು ಗಂಟೆಗಳ ಕಾಲ ರೋಲರ್ ತಿರುಗಿಸಬೇಕು, ಎಷ್ಟು ನೀರು ಹಾಕಬೇಕು, ಮುಂತಾಗಿ ಯಾವುದೇ ಒಂದು ಪ್ರಮಾಣವನ್ನು ನೀವು ನಿಗದಿಪಡಿಸದೆ ಸುಮ್ಮನೆ ಕೆಲಸ ಮಾಡಿ ಅಂದರೆ ಅವರೇನು ಮಾಡುತ್ತಾರೆ? ಪ್ರತಿಯೊಂದು ಫೀಟ್‌ಗೂ ಸೂಕ್ತ ಮಣ್ಣನ್ನು ಹಾಕಿ, ನೀರನ್ನು ಹಾಕಿ ರೋಲರ್‌ನ್ನು ತಿರುಗಿಸಬೇಕು. ರೋಲರ್‌ತಿರುಗಿಸಲು ಇಂತಿಷ್ಟು ಸಮಯವೆಂದು ಪ್ರಮಾಣ ಇದೆ. ಇವರು ಏನು ಮಾಡುತ್ತಾರೆ ಅಂದರೆ ಒಮ್ಮೆ ಒಂದು ಕಡೆ ಮಣ್ಣನ್ನು ಹಾಕಿ ಒಂದು ಗಂಟೆ, ಅರ್ಧ ಗಂಟೆ ರೋಲರ್‌ನ್ನು ತಿರುಗಿಸಿ ಬಿಟ್ಟುಬಿಡುತ್ತಾರೆ. ಆ ಮೇಲೆ ಮುಂದೆ ಇನ್ನೊಂದು ಫೀಟ್ ಹಾಕುತ್ತಾರೆ. ಕೆಲವು ಕಡೆಗಳಲ್ಲಂತೂ ತೋರಿಸುವುದಕ್ಕೆ ಒಂದು ಫೀಟು ಆದರೆ 3-4 ಫೀಟ್‌ಗಳಿಗೆ ಒಮ್ಮೆಯೇ ಮಣ್ಣು ಹಾಕಿ ರೋಲರ್ ತಿರುಗಿಸಿ ಕೆನಾಲ್ ರಿಪೇರಿ ಮಾಡತಕ್ಕಂಥದ್ದು, ನೋಟೀಸ್‌ಗೆ ಬಂದಿದೆ. ಈ ವಿಚಾರವನ್ನು ರಾಯಚೂರು ಭಾಗದಲ್ಲಿರತಕ್ಕಂಥ ಸದಸ್ಯರು ಹೇಳಿದ್ದಾರೆ. ಗುಲ್ಬರ್ಗದಲ್ಲಿರತಕ್ಕಂಥ ನಾರಾಯಣಪುರ ಲೆಫ್ಟ್‌ಬ್ಯಾಂಕ್‌ನಲ್ಲಿಯೂ ಕೂಡ ಇವ್ಹೊತ್ತಿನ ದಿವಸ ಆಗಿರುವ ವಿಚಾರಗಳನ್ನು ತಮ್ಮ ನೋಟೀಸ್‌ಗೆ ತಂದಿದ್ದಾರೆ. ಹೀಗಾಗಿ ಅಲ್ಲಿ ಅಸ್ತವ್ಯಸ್ತವಾಗುತ್ತಾ ಇದೆ. ಈ

ಪ್ರಾಜೆಕ್ಟ್ ಇವ್ಹೊತ್ತಿನ ದಿವಸ ಒಂದು ದೊಡ್ಡ ಕರ್ಮಕಾಂಡವಾಗುತ್ತದೆಯೋ ಏನೋ ಎಂಬ ಸಂಶಯ ಬರುತ್ತದೆ. ಅದು ಈಗಾಗಲೇ ಆಗಿದೆ. ಅದಕ್ಕಾಗಿ ನೀವು ಇನ್‌ವೆಸ್ಟಿಗೇಶನ್ ಮಾಡತಕ್ಕಂಥಾದ್ದು ಬಹಳ ಮುಖ್ಯ. ಅದರಲ್ಲಿ ಯಾರೇ ಇರಬಹುದು. ಆ ವಿಚಾರವು ಸತತವಾಗಿ ಇವ್ಹೊತ್ತು ಬರುತ್ತಾ ಇದೆ. ಎರಡನೆಯದಾಗಿ ಹೇಳುವುದಾದರೆ ಇದೇ ರೀತಿಯಾಗಿ ಕೆಲವು ಮುಂದಿನ ಯೋಜನೆಗಳಲ್ಲಿಯೂ ನಡೆದಿದೆ. ಅದು ಜೀವರ್ಗಿ ಬ್ಯಾಂಕ್ ಕೆನಾಲ್ ಆಗಿರಬಹುದು, ಮುಡುಗೋಳ್ ಬ್ಯಾಂಕ್ ಕೆನಾಲ್ ಇರಬಹುದು, ರೈಟ್‌ಬ್ಯಾಂಕ್ ಕೆನಾಲ್, ರಾಯಚೂರ್ ಇರಬಹುದು, ಇಲ್ಲಿಯೂ ತಾವು ಪೀಸ್-ವರ್ಕ್ ಎಂದು ಕೊಡುತ್ತಾ ಇದ್ದೀರಿ. ಹೇಗೆ ಕೊಟ್ಟಿದ್ದೀರಿ ಎಂಬ ವಿಚಾರವನ್ನು ಇನ್ನೊಂದು ದಿವಸ ಹೇಳುತ್ತೇನೆ. ಯಾರು ಕ್ವಾಲಿಫೈಡ್ ಕಂಟ್ರಾಕ್ಟರ್ಸ್ ಇಲ್ಲ, ಅವರಿಗೆ ಪ್ರಿ-ಕ್ವಾಲಿಫಿಕೇಶನ್ ಏನು ತಾವು ಫಿಕ್ಸ್ ಮಾಡಿದ್ದೀರಿ ಅದ್ಯಾವುದನ್ನೂ ಫಿಕ್ಸ್ ಮಾಡದೇ ಮನಸ್ಸಿಗೆ ಬಂದಹಾಗೆ ಯಾರಿಗೆ ಬೇಕು ಅವರಿಗೆ ತರಾತುರಿಯಲ್ಲಿ ಎರಡು ತಿಂಗಳುಗಳ ಹಿಂದೆ ನೀವು ಬೆಂಗಳೂರಿನಲ್ಲಿ ಕುಳಿತು ಇವರಿಗೆ ಇಷ್ಟು ಕೊಡಿ, ಅವರಿಗೆ ಇಷ್ಟು ಕೊಡಿ ಎಂದು ಅಲಾಟ್ ಮಾಡಿದ್ದೀರಿ. ಒಬ್ಬರಿಗೆ 1, ಮತ್ತೊಬ್ಬರಿಗೆ 2, 5 ಕಿ.ಮೀ.ಗಳು ಹೀಗೆ ಕೊಟ್ಟಿದ್ದೀರಿ. ಮನಸ್ಸಿಗೆ ಬಂದಂತೆ ಅವರ ಹೆಸರು, ಬರೀ ರೆಕಮಂಡೇಶನ್ ಮುಂತಾದ ಪ್ರಭಾವಕ್ಕೊಳಗಾಗಿ ಸರಕಾರದವರು ಕೊಟ್ಟಿದ್ದಾರೆ. ಇದನ್ನು ನಿಮ್ಮ ಎಂ.ಡಿ. ಯವರವನ್ನು ಸೇರಿಸಿ ಎಲ್ಲರಿಗೂ ಹೇಳುತ್ತಾ ಇದ್ದೇನೆ. ಅದನ್ನು ಕೊಡಬೇಕಾದರೂ ಕೂಡ ಇಷ್ಟಿಷ್ಟು ಕಿ.ಮೀ.ಗೆ ಇಷ್ಟಿಷ್ಟು ಹಣ ಅಥವಾ ಎಷ್ಟು ಕ್ವಾಂಟಿಟಿ ಆಫ್ ವರ್ಕ್ ಇದೆ, ಅದಕ್ಕೆ ಎಷ್ಟು ಪರ್‌ಸೆಂಟೇಜ್? ಹತ್ತು ಕೋಟಿಗಳ ವರ್ಕ್ ಇದ್ದರೆ ಎಷ್ಟು ಪರ್‌ಸೆಂಟೇಜ್? ಇದೂ ಕೂಡ ಇವ್ಹೊತ್ತಿನ ದಿವಸ ಹೊಸ ಕೆನಾಲ್‌ನಲ್ಲಿ ನಡೆದಿದೆ ಎಂಬುದು ತಮಗೂ ಕೂಡ ಗೊತ್ತಿರಬಹುದು. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದರ ಬಗ್ಗೆಯೂ ಕೂಡ ತಾವು ಎನ್‌ಕ್ವಾಯರಿ ಮಾಡಬೇಕಾಗುತ್ತದೆ. ಅದರಲ್ಲಿ ಸುಮಾರು ಒಂದು ಸಾವಿರ ಕೋಟಿಗಳ ಕೆಲಸ ಅಪ್ಪರ್‌ಕೃಷ್ಣ ಪ್ರಾಜೆಕ್ಟ್‌ನಲ್ಲಿ ಅಲಾಟ್ ಆಗಿದೆ. ಒಂದು ಸಾವಿರ ಕೋಟಿ ರೂ. ಗಳ ಕೆಲಸವನ್ನು ಇವ್ಹೊತ್ತಿನ ದಿವಸ ನೀವು ಪೀಸ್‌ವರ್ಕ್ ಬೇಸಸ್ ಮೇಲೆ ಕೊಟ್ಟಿದ್ದೀರಿ. ಉದ್ದೇಶ ಏನೆಂದರೆ ಬೇಗನೇ ಕೆಲಸವಾಗಬೇಕು, ಎರಡು ಸಾವಿರ ಇಸವಿಯೊಳಗಾಗಿ ಮುಗಿಸಬೇಕು, ಎಂಬ ಸದುದ್ದೇಶದಿಂದ ಕೊಟ್ಟಿದ್ದೀರೆಂದು ನೀವು ಹೇಳಿ ಕೊಂಡರೂ ಕೂಡ, ಅಲಾಟ್ ಮಾಡುವುದರಲ್ಲಿ ಏನು ದುರುದ್ದೇಶವಿದೆ ಮತ್ತು ಅಲ್ಲಿರತಕ್ಕಂಥ ಎಂ.ಡಿ.ಯವರು ಮಾಡಿದ್ದಾರೋ, ಸರಕಾರದ ಅಪ್ರೂವಲ್ ತೆಗೆದುಕೊಂಡು ಮಾಡಿದ್ದಾರೋ ಅಥವಾ ಬೆಂಗಳೂರಿನ ಬಾಲಬ್ರೂಯಿಯಲ್ಲಿ ಕುಳಿತು-ಕೊಂಡು ಮಾಡಿದ್ದಾರೋ ಎನ್ನುವುದನ್ನು ತಾವು ಸ್ಪಷ್ಟಪಡಿಸಬೇಕು. ಏಕೆಂದರೆ ಇದನ್ನು ನೀವು ಈಗ ಕಂಟ್ರೋಲ್ ಮಾಡದಿದ್ದರೆ ವೆಸ್ಟ್‌ಬ್ಯಾಂಕ್ ಕೆನಾಲ್ ನಾರಾಯಣಪುರ ಆದಹಾಗೆ ಆಗುತ್ತದೆ. ತುಂಗ-ಭದ್ರಾದಲ್ಲಿ ಆದ ಹಾಗೆ ಆಗುತ್ತದೆ. ಮತ್ತೆ ಪುನಃ ನಮ್ಮನ್ನು ತೊಂದರೆಗೆ ಈಡು ಮಾಡಿಬಿಡುತ್ತೀರಿ. ಇವ್ಹೊತ್ತು ಕೋಟಿಗಟ್ಟಲೆ ಹಣವನ್ನು ಜನರ ಹತ್ತಿರ ಸಾಲಪಡೆದುಕೊಂಡು ಹಾಗೂ ನಿಗಮದಿಂದ ನಾವು ಹಣವನ್ನು ಕಲೆಕ್ಟ್ ಮಾಡುತ್ತಾ ಇದ್ದೇವೆ. 17-18 ಪರ್ಸೆಂಟ್‌ನಷ್ಟು ಇಂಟ್ರೆಸ್ಟ್ ಕೂಡ ಕೊಡುತ್ತಾ ಇದ್ದೇವೆ. ಇಂಟ್ರೆಸ್ಟ್ ಕೊಟ್ಟು ನಾವು ಹಣವನ್ನು ಪಡೆದುಕೊಳ್ಳುವಾಗ ಅದರ ಸದು-

ಪಯೋಗವಾಗಬೇಕು. ದುರುಪಯೋಗವಾಗಲು ಬಿಡಬಾರದು. ಅದರ ಜೊತೆಗೆ ಕ್ವಾಲಿಟಿ ಕಂಟ್ರೋಲ್‌ನ್ನು ಕೂಡ ಮಾಡಬೇಕಾಗುತ್ತದೆ. ಹಿಂದೆ ಹೀಗೆ ಕಂಟ್ರೋಲ್ ಮಾಡದಿದ್ದ ಕಾರಣ ಇವ್ಹೊತ್ತು ಈ ಪರಿಸ್ಥಿತಿಯು ಬಂದಿದೆ. ಅದಕ್ಕಾಗಿ ಪೂರ್ಣ 78 ಕಿ.ಮೀ.ಗಳನ್ನು ಇನ್‌ವೆಸ್ಟಿಗೇಶನ್ ಮಾಡಿಸಬೇಕು. ಹಾಗೆಯೇ ಈಗ ಉಳಿದಂಥ ರೈಟ್ ಬ್ಯಾಂಕ್ ಕೆನಾಲ್‌ನಲ್ಲಿ, ಜೇವರ್ಗಿ ಬ್ಯಾಂಕ್ ಕೆನಾಲ್‌ನಲ್ಲಿ ಮುಡುಗೋಡು ಬ್ರಾಂಚ್‌ನಲ್ಲಿ, ಇಂಡಿ ಬ್ರಾಂಚ್‌ನಲ್ಲಿ ಏನು ಅಲಾಟ್‌ಮೆಂಟ್‌ನ್ನು ತಾವು ಮಾಡಿದ್ದೀರಿ ಅದರ ಬಗ್ಗೆಯೂ ನಾನು ಈಗಾಗಲೇ ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೇನೆ. ಅದರ ಉತ್ತರವನ್ನು ತಾವುಗಳು ತಯಾರಿಸಿಕೊಡಿ. ಆದರೆ ತಾವುಗಳು ಕೂಡಲೇ ಪ್ರಿಕಾಶನ್ ತೆಗೆದುಕೊಳ್ಳಬೇಕು. ಅದು ದುರುಪಯೋಗವಾಗದ ರೀತಿಯಲ್ಲಿ ತಾವು ಅದನ್ನು ಮಾಡಬೇಕು. ಇದನ್ನು ತಾವು ಯಾವ ರೀತಿಯಾಗಿ ಸರಿಪಡಿಸುತ್ತೀರಿ ಹಾಗೂ ಯಾರು ಇದಕ್ಕೆ ಕಾರಣಕರ್ತರು ಇದ್ದಾರೆ ಅಂಥ ಅಧಿಕಾರಿಗಳ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ಎಂಬಿತ್ಯಾದಿಗಳನ್ನು ತಾವು ಸ್ಪಷ್ಟಪಡಿಸಬೇಕೆಂದು ಕೇಳಬಯಸುತ್ತೇನೆ. ಎಕ್ಸ್‌ಪರ್ಟ್ ಕಮಿಟಿ ರಚನೆಯನ್ನು ಯಾವಾಗ ಮಾಡುತ್ತೀರಿ? ಎಂಬ ಬಗ್ಗೆ ಸ್ಪಷ್ಟಪಡಿಸಬೇಕು. ಈ ಅಡ್‌ಜರ್ನ್‌ಮೆಂಟ್ ಮೋಶನ್‌ನ್ನು ಮಂಡಿಸುವುದಕ್ಕಾಗಿ ಅವಕಾಶ ಕೊಟ್ಟರೆ, ಉಳಿದಂಥ ವಿಷಯಗಳನ್ನು ಕೂಡ ಪ್ರಸ್ತಾಪ ಮಾಡಲು ಅನುಕೂಲವಾಗುತ್ತದೆ. ಹೇಗೂ ಇರಿಗೇಶನ್ ಡಿಮ್ಯಾಂಡ್‌ನ ಮೇಲೆ ಇಷ್ಟೆಲ್ಲವನ್ನು ಮಾತನಾಡಲು ಆಗುವುದಿಲ್ಲ. ಮಾತನಾಡುವುದಾದರೂ ಇದೇ ವಿಷಯ ಇರುತ್ತದೆ. ಅದಕ್ಕೆ ತಾವು ಅವಕಾಶ ಕೊಟ್ಟರೆ ಉಳಿದಂಥ ವಿಷಯಗಳನ್ನು ಪ್ರಸ್ತಾಪ ಮಾಡೋಣ. ಯಾವ ರೀತಿಯಾಗಿ ಅಲ್ಲಿ ಕೆಲಸ ನಡೆದಿವೆ, ಡಿಸಿಲ್ಟಿಂಗ್ ವರ್ಕ್ ನಡೆದಿದೆ, ಅಥವಾ ಸ್ಟ್ರೆಂಗ್ತನಿಂಗ್ ವರ್ಕ್ ಆಫ್ ದಿ ಬಂಡ್ ಎಂದು ಹೇಳಿ ಹೇಗೆ ಕೆಲಸ ಮಾಡಿದ್ದಾರೆ, ಮೆಂಟೇನೆನ್ಸ್‌ನ ಹೆಸರಿನ ಮೇಲೆ ಕೋಟ್ಯಾಂತರ ರೂ. ಗಳ ಪರ್ಚೇಸ್‌ನ್ನು ಯಾವ ರೀತಿಯಾಗಿ ಮಾಡಿದ್ದಾರೆ? ಎಷ್ಟೊಂದು ಸಾಮಾನು ಅಲ್ಲಿದೆ, ಮತ್ತೆ ಅದೇ ಡೂಪ್ಲಿಕೇಟ್ ಪರ್ಚೇಸ್ ಮಾಡತಕ್ಕಂಥಾದ್ದನ್ನು ಮಾಡಿ ಕಮಿಶನ್ ಹೊಡೆಯುತ್ತಾ ಇದ್ದಾರೆ. ಈ ಎಲ್ಲಾ ವಿಷಯಗಳ ಬಗ್ಗೆ ಸರಕಾರದವರು ಸವಿಸ್ತಾರವಾದ ಮಾಹಿತಿಗಳನ್ನು ಕೊಡಬೇಕಾಗುತ್ತದೆ. ಆದುದರಿಂದ ತಾವುಗಳು ದಯಮಾಡಿ ಈ ನಿಲುವಳಿ ಸೂಚನೆಗೆ ಅನುಮತಿಯನ್ನು ಕೊಡಬೇಕು. ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಈ ವರ್ಷದಲ್ಲಿ ಎರಡನೇ ಬಾರಿಗೆ ಈ ಎಡದಂಡೆ . . .

ಶ್ರೀ ವಾಟಾಳ್‌ನಾಗರಾಜ್:- ಮಾನ್ಯ ಅಧ್ಯಕ್ಷರೇ, ಸದನದಲ್ಲಿ ಯಾರೂ ಮಂತ್ರಿಗಳು ಇಲ್ಲ. ಇಡೀ ಸದನದಲ್ಲಿ ಈಗ 23 ಜನ ಇದ್ದಾರೆ. ಅದರಲ್ಲಿ 11 ಜನ ಸಚಿವರು, 12 ಜನ ಸದಸ್ಯರು ಇದ್ದಾರೆ. ಅಧಿಕಾರಿಗಳ ಸಾಲಿನಲ್ಲಿ ಒಬ್ಬ ಕಾರ್ಯದರ್ಶಿಯನ್ನು ಬಿಟ್ಟರೆ ಬೇರೆ ಯಾರೂ ಇಲ್ಲ ನಿನ್ನೆ ಮಾತ್ರ ಇಡೀ ದಿವಸ ಮುಖ್ಯಮಂತ್ರಿಯವರು ಉತ್ತರ ಕೊಡುತ್ತಾರೆಂದು, ಆಕಾಶವು ಎತ್ತೆತ್ತೋ ತಿರುಗುತ್ತದೆಯೋ ಎಂದು ಹೇಳಿ ಎಲ್ಲಾ ಪೀಠಗಳು ಸದನದಲ್ಲಿ ತುಂಬಿದ್ದವು.

(ಗೊಂದಲ)

ಶ್ರೀ ಕೆ.ಎನ್. ನಾಗೇಗೌಡ:- ಅಧಿಕಾರಿಗಳೆಲ್ಲಾ ಇಲ್ಲಿಯೇ ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ತಮ್ಮಲ್ಲಿ ಅನೇಕ ಸಾರಿ ಇದರ ಬಗ್ಗೆ ಹೇಳಿದ್ದೇವೆ. ಹಿಂದೆ ತಾವು ಈ ಪೀಠದಲ್ಲಿ ಕುಳಿತಾಗ ತಾವು ಕೂಡ ಪ್ರಶ್ನೆಯನ್ನು ಮಾಡಿದ್ದೀರಿ. ತಮಗೆ ಸ್ವಲ್ಪ ಕಸಿವಿಸಿಯಾಯಿತು. ಸದನದಲ್ಲಿ ಮಂತ್ರಿಗಳು ಅಧಿಕಾರಿಗಳು ಇಲ್ಲವೆಂದು ಕಸಿವಿಸಿ ಆಯಿತು. ಇವತ್ತು ಕೂಡ ಇದೇ ಪರಿಸ್ಥಿತಿ ನಿರ್ಮಾಣವಾಗಿದೆ.

ಉಪಾಧ್ಯಕ್ಷರು:- ಈಗ ಕಾಲಹರಣ ಮಾಡುವುದು ಬೇಡ ತಾವು ದಯಮಾಡಿ ಕೂಡಿ, ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಯಡಿಯೂರಪ್ಪನವರು ಮಾತನಾಡಲಿಕ್ಕೆ ಅಡ್ಡಿ ಪಡಿಸುತ್ತಿಲ್ಲ. ಮಾನ್ಯ ಯಡಿಯೂರಪ್ಪನವರಿಗೇ ಹೇಳುತ್ತಿದ್ದೇನೆ. ವಿರೋಧ ಪಕ್ಷದ ನಾಯಕರಾಗಿ ಅವರೇ ಪರಿಸ್ಥಿತಿಯನ್ನು ನೋಡಲಿ. ನನ್ನದೇನೂ ಅಭ್ಯಂತರವಿಲ್ಲ.

ಉಪಾಧ್ಯಕ್ಷರು:- ಸಮಯ ಹರಣ ಮಾಡುವುದು ಬೇಡ ಅವರು ಹೇಳಿಕಳಿಸಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಸದನದಲ್ಲಿ ಕುಳಿತುಕೊಳ್ಳಬೇಕು ಮೊಗಸಾಲೆಯಲ್ಲಿ ಕುಳಿತುಕೊಳ್ಳುವುದಲ್ಲ. ಶಾಸನ ಸಭೆ ಎಂದು ತಿಳಿದುಕೊಂಡರೋ ಅಥವಾ ಕಾಫಿ ಕುಡಿದು ಬಂದು ಕುಳಿತುಕೊಳ್ಳುವುದಕ್ಕೆ ಇದನ್ನು ಹೋಟೆಲ್ ಎಂದು ತಿಳಿದುಕೊಂಡಿದ್ದಾರೋ? ಪಕ್ಕದಲ್ಲೇ ಸದಸ್ಯರುಗಳು ಕುಳಿತಿದ್ದಾರೆ. ಶಾಸನ ಸಭೆಗೆ ಎಷ್ಟು ಗೌರವವನ್ನು ಕೊಡಬೇಕೋ ಅಷ್ಟು ಗೌರವವನ್ನೂ ಆಳುವ ಪಕ್ಷದವರು ಕೊಡುತ್ತಿಲ್ಲ. ತಾವು ಅವರ ಕಿವಿ ಹಿಂಡಬೇಕು. ಪ್ರತಿಯೊಬ್ಬರಿಗೂ ಹೇಳಬೇಕು. ಎಷ್ಟು ಸಲ ಹೇಳಿದರೂ ''ಕೋಣನ ಮುಂದೆ ಕಿಂದರಿ ಬಾರಿಸಿದ'' ಹಾಗಾಗುತ್ತದೆ.

ಶ್ರೀ ಕೆ.ಎನ್. ನಾಗೇಗೌಡ:- ಬೆಳಗಿನಿಂದ ಮಾನ್ಯ ವಾಟಾಳ್‌ರವರು ಇರಲೇ ಇಲ್ಲ. ಈಗ ಬಂದಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ವಾಟಾಳ್‌ರವರು ಅವರ ಕಷ್ಟವನ್ನು ಅರ್ಥ ಮಾಡಿಕೊಳ್ಳಬೇಕು. 4-5 ದಿವಸಕ್ಕೆ ಅಧಿವೇಶನ ಮುಗಿಯುತ್ತದೆ ಮುಂದೆ ಏನೇನು ಮಾಡಬೇಕೆಂಬ ಪ್ಲಾನ್ ಬಗ್ಗೆ ಅವರು ಒಟ್ಟಿಗೆ ಸೇರಿದರೆ ತಪ್ಪೇನು?

ಶ್ರೀ ರಮೇಶ್ ಸಿ. ಜಿಗಜಿಣಗಿ:- ನಮ್ಮಂತಹ ದಪ್ಪ ದಪ್ಪ ಮಂದಿಯೆಲ್ಲ ಕಾಣಿಸಲಿಲ್ಲವೆಂದರೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ:- 14ನೇ ತಾರೀಖು ಅಧಿವೇಶನ ಮುಗಿಯುತ್ತದೆಂದು ಈಗಾಗಲೇ ತೀರ್ಮಾನವಾಗಿದೆ ಅವರು ಒಟ್ಟಿಗೆ ಸೇರುವುದೇ ಅಪರೂಪ. ಅವರದ್ದೇ ಆದ ಬೇರೆ ಬೇರೆ

ಗುಂಪಿನವರು ಸೇರಿ ಚರ್ಚೆ ಮಾಡಿದರೆ ನೀವ್ಯಾಕೆ ಅಡ್ಡಿ ಮಾಡುತ್ತೀರಿ? ಮಾಡಿ, ನಾನಂತೂ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ನೀವು ಹೇಳುವುದರಲ್ಲಿ ಸಂಪೂರ್ಣ ಅರ್ಥ ಇದೆ. ಮುಂದೇನು ಮಾಡಬೇಕೆಂಬ ಬಗ್ಗೆ ಎಲ್ಲಾ ಭಯ ಬಿದ್ದಿದ್ದಾರೆ, ಭೀತಿಯಲ್ಲಿದ್ದಾರೆ ಅವರು ಪ್ರಧಾನ ಮಂತ್ರಿಗಳ ಪ್ರವಾಸ ಕಾರ್ಯಕ್ರಮವನ್ನು ಜೋರಾಗಿ ಮಾಡಬೇಕೆಂದು ವ್ಯವಸ್ಥೆ ನಡೆಯುತ್ತಿದೆ ಹೌದಲ್ಲವೇ?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:- ನಮ್ಮ ಬಗ್ಗೆ ನೀವೇಕೆ ಚಿಂತನೆ ಮಾಡುತ್ತೀರಿ ನಿಮ್ಮದನ್ನು ನೀವು ನೋಡಿ. ಅದು ನಮ್ಮ ಕೆಲಸ. ನೀವೇಕೆ ಚಿಂತೆ ಮಾಡುತ್ತೀರಿ?

+ ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) :- ನಾರಾಯಣಪುರ ಎಡದಂಡೆ ನಾಲೆ ಎರಡನೇ ಬಾರಿಗೆ ಮತ್ತೊಮ್ಮೆ ಬಿರುಕು ಬಿಟ್ಟು ಅಚ್ಚುಕಟ್ಟು ಪ್ರದೇಶಕ್ಕೆ ತೊಂದರೆಯಾಗಿದೆ ಎಂದು ಇಲ್ಲಿ ಪ್ರಸ್ತಾಪವಾಗಿದೆ. 67ನೇ ಕಿಲೋ ಮೀಟರ್ ಪ್ರದೇಶದಲ್ಲಿ ಮುದನೂರು ಎಂಬ ಗ್ರಾಮದ ಬಳಿ ಮೂರು ಸಾವಿರ ಕ್ಯೂಸೆಕ್ಸ್ ನೀರು ಬಿಡುವ ಕಾಲದಲ್ಲಿ 4 ದಿವಸಗಳ ಹಿಂದೆ ಬಿರುಕು ಬಿಟ್ಟಿದೆ. ಮಾನ್ಯ ಖರ್ಗೆಯವರು ಹೇಳಿದಂತೆ 8,000 ಕ್ಯೂಸೆಕ್ಸ್ ನೀರು ಬಿಡುವ ಡಿಸೈನ್ ಮಾಡಿರುವಂತಹ ಈ ಕಾಲುವೆಯಲ್ಲಿ 3,000 ಕ್ಯೂಸೆಕ್ಸ್ ನೀರು ಬಿಟ್ಟಾಗಲೇ ಇದು ಡ್ಯಾಮೇಜಾಗಿ ಒಡೆದು ಹೋಗುತ್ತಿದೆ. ಇದು ಮೊದಲನೇ ಬಾರಿ ಅಲ್ಲ ಅನೇಕ ಬಾರಿ ಆಗಿದೆ. ದಯಮಾಡಿ ಇದನ್ನು ಸೀರಿಯಸ್ ಆಗಿ ತೆಗೆದುಕೊಳ್ಳಿ ಎಂದು ಮಾನ್ಯ ಸಚಿವರಿಗೆ ತಿಳಿಸಬಯಸುತ್ತೇನೆ. ಕೃಷ್ಣ ಭಾಗ್ಯ ಜಲ ನಿಗಮದಿಂದ ಸಾಲ ಪಡೆದು ಸಾವಿರಾರು ಕೋಟಿ ಖರ್ಚು ಮಾಡುತ್ತಿದ್ದೇನೆ. ಇದೇ ರೀತಿ ಕಾಲುವೆ ನಿರ್ಮಾಣವಾದರೆ ಕಳಪೆ ಕಾಮಗಾರಿಯಾದರೆ ಯಾವ ರೈತರಿಗೆ ಆ ನೀರು ತಲುಪಿ ಅವನು ಗೌರವದಿಂದ ಬೆಳೆಯನ್ನು ಬೆಳೆದು ಬದುಕಬೇಕೆಂಬ ಆಸೆ ಇರುವಂತಹವರಿಗೆ ಉಸಿರು ಕಟ್ಟುವ ಪರಿಸ್ಥಿತಿ ಬಂದಿದೆ. ಕಾಮಗಾರಿ ಕೆಲಸಗಳು ಕೆಲವು ಪುಡಾರಿಗಳಿಗೆ, ಕೆಲವು ಅಧಿಕಾರಿಗಳಿಗೆ, ಕೆಲವು ಕಂಟ್ರಾಕ್ಟರ್‌ದಾರರಿಗೆ ತಿನ್ನುವುದಕ್ಕೆ ಸ್ಥಳ ಆಗಿದೆಯೇ ಹೊರತು, ಪ್ರಾಮಾಣಿಕವಾಗಿ ಅಲ್ಲಿ ಕೆಲಸ ಮಾಡಬೇಕೆನ್ನುವವರಿಗೆ ಅಲ್ಲ. ಮೇಲ್ವಿಚಾರಣೆ ಇಲ್ಲದ ಪರಿಣಾಮ ನಾವು ಇಂತಹ ಪರಿಸ್ಥಿತಿಯನ್ನು ಇವತ್ತು ಎದುರಿಸುತ್ತಿದ್ದೇವೆ. ತಾವೂ ಅಲ್ಲಿಗೆ ಹೋಗಿ ಬಂದಿದ್ದೀರಿ ನಾನೂ ಹೋಗಿ ಬಂದೆ ಮಾನ್ಯ ಖರ್ಗೆಯವರು ಕೂಡ ಹೋಗಿ ನೋಡಿ ಬಂದಿದ್ದಾರೆ. ತುಂಗಭದ್ರಾ ಎಡದಂಡೆ ನಾಲೆ ಯಾವ ಪರಿಸ್ಥಿತಿಗೆ ಬಂದಿದೆ, ನೀವು ಸಮಯಕ್ಕೆ ಸರಿಯಾಗಿ ನೀರು ಕೊಡದೆ ಅಲ್ಲಿ ಕೋಟ್ಯಾಂತರ ರೂಪಾಯಿ ಬೆಳೆ ನಾಶವಾಗುತ್ತಿದೆಂದು, ನಾವೂ ಕೇಳುತ್ತಿದ್ದೇವೆ, ನೋಡುತ್ತಿದ್ದೇವೆ. ಇವತ್ತು ನಾರಾಯಣಪುರ ಎಡದಂಡೆ ನಾಲೆಯಲ್ಲೂ ಅದೇ ರೀತಿಯ ಪರಿಸ್ಥಿತಿ ಬಂದಿದೆ. ತಾವು ಎಷ್ಟು ಹಣವನ್ನು ಇದರ ರಿಪೇರಿಗಾಗಿ ಖರ್ಚು ಮಾಡಿದ್ದೀರಿ ಎಂಬ ಅಂಕಿ ಅಂಶ ಕೊಡಿ. ಎಲ್ಲಿ ಈ ನಾಲೆ ಒಡೆಯುತ್ತಿದೆ ಅಲ್ಲೇ ಮತ್ತೆ ಬಿರುಕು ಬಿಡುತ್ತಿದೆ. ಮತ್ತೆ ಇಲ್ಲಿ ರಿಪೇರಿ ಮಾಡಿದಿರಿ ಎಂದರೆ ಮುಂದಿನ ವರ್ಷ ಇನ್ನೊಂದು ಕಡೆ ನಿಶ್ಚಿತವೆಂದು

ತಿಳಿದುಕೊಳ್ಳಿ. ನೀವು ನಾನು ಹೇಳುವುದನ್ನು ಹಗುರವಾಗಿ ತಿಳಿದುಕೊಳ್ಳುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ನಿಮಗೆ ಒಂದು ಮಾಹಿತಿ ಕೊಡುತ್ತೇನೆ. ನಾನು ಹೋಗಿ ಬಂದು ಹೇಳುತ್ತಿದ್ದೇನೆ. ನಾರಾಯಣಪುರ ಡ್ಯಾಂನ ಕೆಲಸ ಕಳಪೆ ಕಾಮಗಾರಿಯದ್ದಾಗಿದೆ, ಕಳಪೆ ಕೆಲಸ ಆಗಿದೆ. ದೊಡ್ಡ ಪ್ರವಾಹ ಬಂದರೆ ತೊಂದರೆಯಾಗುತ್ತದೆ. ಆದು ಆಗಬಾರದೆಂದು ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತೇನೆ. ನಾರಾಯಣಪುರ ಡ್ಯಾಂ ಧಕ್ಕೆಯಾಗಬಹುದು ಕುಸಿದು ಬೀಳಬಹುದೆಂದು ನಾವು ಆ ಕಡೆ ಕೇಳುತ್ತಿದ್ದೇವೆ. ಬರೀ ಕಾಲುವೆ ಮಾತ್ರ ಅಲ್ಲ. ಎಕ್ಸ್‌ಪರ್ಟ್ಸ್ ಸಮಿತಿಯನ್ನು ಮಾಡಿ ನಾರಾಯಣಪುರ ಎಡದಂಡೆ ನಾಲೆ ರಿಪೇರಿ ಮಾಡುವುದು ಒಂದು ಕಡೆಯಾದರೆ ನಾರಾಯಣಪುರ ಡ್ಯಾಂಅನ್ನೇ ಕೆಲವು ಕಡೆ ಟೆಸ್ಟ್ ಮಾಡಿಸಿ ಎಕ್ಸ್‌ಪರ್ಟ್ಸ್‌ಗೆ ತೋರಿಸಿ ಅದನ್ನು ಬಿಗಿ ಮಾಡುವುದಕ್ಕೆ ಸಾಧ್ಯವೇ ಎಂದು ಆ ಕಡೆಗೆ ವಿಶೇಷವಾದ ಗಮನ ಕೊಡಬೇಕು. ತಮಗೆ ಅದರ ಬಗ್ಗೆ ಕಳಕಳಿ ಇದೆ ತಾವು ಅದನ್ನು ಮಾಡಿಸುತ್ತೀರಿ ಅದರ ಬಗ್ಗೆ ವಿಶೇಷವಾದ ಗಮನವನ್ನು ಕೊಡುತ್ತೀರಿ ಎಂದು ನಾನು ಈ ಮಾತನ್ನು ಹೇಳುತ್ತಿದ್ದೇನೆ. ಈ ಕಾಲುವೆಯ 56, 63ನೇ ಕಿಲೋ ಮೀಟರು ಪ್ರದೇಶದಲ್ಲಿ ಯಾವ ಕ್ಷಣದಲ್ಲಿ ಬೇಕಾದರೂ ಬಿರುಕು ಬಿಡಬಹುದು ಇದರ ಬಗ್ಗೆ ಪತ್ರಿಕೆಯಲ್ಲಿ ಬಂದಿದೆ. ಆ ಭಾಗದಲ್ಲಿ ನಾನು ಪ್ರವಾಸ ಮಾಡಿದಂಥ ಕಾಲದಲ್ಲಿ ಅಲ್ಲಿರುವಂಥ ರೈತರು ಈ ಮಾತನ್ನು ಹೇಳುತ್ತಿದ್ದಾರೆ. ಈಗಾಗಲೇ ಕಾಲುವೆ ಕೆಲಸವನ್ನು ರಿಪೇರಿ ಮಾಡುತ್ತೇವೆಂದು ಕೋಟ್ಯಾಂತರ ರೂಪಾಯಿಗಳ ಹಣವನ್ನು ನುಂಗಿಯಾಗಿದೆ. ಅದೇ ರೀತಿಯ ಪರಿಸ್ಥಿತಿ ಎಲ್ಲ ಕಡೆ ಇವತ್ತು ಕಾಣುತ್ತಿದೆ. ಇದರ ಬಗ್ಗೆ ಸಮಗ್ರವಾದ ಪರಿಶೀಲನೆ ತಾವು ಮಾಡಬೇಕಾಗಿದೆ. ಆದು ತುಂಗಭದ್ರ ಎಡದಂಡೆ ನಾಲೆ ಇರಬಹುದು ಆಥವಾ ನಾರಾಯಣಪುರ ಎಡದಂಡೆ ನಾಲೆ ಇರಬಹುದು ಈ ರೀತಿ ಪ್ರತಿ ವರ್ಷ ಒಂದಲ್ಲ ಒಂದು ದೂರುಗಳು ಬರುತ್ತಿವೆ. ಇದರ ಪರಿಣಾಮ ತಿಂಗಳುಗಟ್ಟಲೆ ರೈತನಿಗೆ ಸಮಯಕ್ಕೆ ಸರಿಯಾಗಿ ನೀರು ಬರದೆ ಸಮಯಕ್ಕೆ ಸರಿಯಾಗಿ ಆತನು ಬೆಳೆದಂತಹ ಬೆಳೆ ಅವನ ಕೈಗೆ ಬರದೆ ಅವನು ಬೀದಿ ಪಾಲಾಗುವ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ತಮಗೆ ಗೊತ್ತಿರುವ ಹಾಗೆ ಕಳೆದ ವರ್ಷ ತುಂಗಭದ್ರಾ ಎಡದಂಡೆ ನಾಲೆಯಲ್ಲಿ ಸಮಯಕ್ಕೆ ಸರಿಯಾಗಿ ನೀರು ಕೊಡುವುದಕ್ಕೆ ಆಗದೆ ತೊಂದರೆಯನ್ನು ರೈತರು ಅನುಭವಿಸಿದ್ದಾರೆ. ರೈತರು ಬೀದಿ ಪಾಲಾಗಿದ್ದಾರೆ. ಈಗಲೂ ನಾವು ಕೊಡುವುದಕ್ಕಾಗಿಲ್ಲ ಅದು ತಮಗೆ ಗೊತ್ತಿದೆ ಎಂದು ನಾನು ತಿಳಿದಿದ್ದೇನೆ. ಬಹಳಷ್ಟು ಮಾತನಾಡುವಂತಹ ಆಗತ್ಯ ಇಲ್ಲ. ಡಿಮ್ಯಾಂಡ್ಸ್ ಬಂದಾಗ ಚರ್ಚೆ ಮಾಡುವವರಿದ್ದೇವೆ. ತಾವು ಸ್ಥಳಕ್ಕೆ ಹೋಗಿ ಬರುತ್ತಿದ್ದೀರಿ ಆದ್ದರಿಂದ ಈಗ ನಾನು ಹೆಚ್ಚು ಸಮಯವನ್ನು ಉಪಯೋಗ ಮಾಡಿಕೊಳ್ಳುವುದಿಲ್ಲ. ಇನ್ನು ಅನೇಕ ಸದಸ್ಯರು ಮಾತನಾಡುವವರು ಇದ್ದಾರೆ ಅನೇಕ ಪ್ರಮುಖ ಅಂಶಗಳನ್ನು ಪ್ರಸ್ತಾಪ ಮಾಡುವವರಿದ್ದಾರೆ. ನಾರಾಯಣಪುರ ಎಡದಂಡೆ ನಾಲೆಯನ್ನು ರಿಪೇರಿಗೇನು ತೆಗೆದುಕೊಳ್ಳುತ್ತೀರಿ ಆ ರಿಪೇರಿ ಇನ್ನು ಮುಂದೆ ಆಗದಂತೆ ಸರಿಯಾದಂತಹ ಕಾಮಗಾರಿಯಾಗುವ ಹಾಗೆ ನೋಡಿಕೊಳ್ಳುತ್ತೀರೋ? ನಾರಾಯಣಪುರ ಡ್ಯಾಂ ಕಳಪೆ ಕಾಮಗಾರಿಯಿಂದ ಕೂಡಿದೆ ಅದು ಕುಸಿದು ಬೀಳಬಹುದೆನ್ನುವ ಆತಂಕ ಆ ಭಾಗದ ಜನರಲ್ಲಿ ಮೂಡಿದೆ. ಇದು ಸತ್ಯವಾದರೆ ಇದನ್ನು ಎಕ್ಸ್-

ಪರ್ಸ್ಸ್ ಸಮಿತಿಗೆ ಕೊಟ್ಟು ತನಿಖೆ ಮಾಡಿಸಿ ಭಯ ಭೀತರಾಗಿರುವ ಜನರಿಗೆ ರಕ್ಷಣೆ ಮತ್ತು ಅಗತ್ಯ-ವಿರುವ ರಿಪೇರಿ ಕೆಲಸವನ್ನು ಮಾಡಿಸಿ ಡ್ಯಾಂ ಅನ್ನು ಭದ್ರ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯ ಇದೆಯೇ? ನಾರಾಯಣಪುರ ಎಡದಂಡೆ ನಾಲೆಯನ್ನು ಭದ್ರ ಮಾಡುವುದಕ್ಕೋಸ್ಕರ ಎಷ್ಟು ಬಾರಿ ರಿಪೇರಿ ಮಾಡಿದ್ದೀರಿ ಇದಕ್ಕೆ ಎಷ್ಟು ಕೋಟಿ ರೂಪಾಯಿಗಳನ್ನು ಇದುವರೆಗೆ ಖರ್ಚು ಮಾಡಿ-ದ್ದೀರಿ ಎಂದು ತಿಳಿಸಬೇಕು. ಸಾಮಾನ್ಯ ಜನರು ಕೊಟ್ಟಂತಹ ತೆರಿಗೆ ಹಣವನ್ನು ಅಧಿಕಾರಿಗಳು ಅಪವ್ಯಯ ಮಾಡುವುದಕ್ಕೆ ನೀವೂ ಸಹಕಾರ ಕೊಟ್ಟುಕೊಂಡು ಕುಳಿತುಕೊಂಡರೆ ಬೇಲಿಯೇ ಎದ್ದು ಹೊಲ ಮೇಯ್ದಂತಹ ಪರಿಸ್ಥಿತಿ ಆಗಬಹುದು. ಇವತ್ತು ಜನ ಒಂದು ರೀತಿ ಆಕ್ರೋಶಗೊಂಡಿದ್ದಾರೆ, ಭಯ ಭೀತರಾಗಿದ್ದಾರೆ, ಬೇಸತ್ತಿದ್ದಾರೆ. ಜನರು ಬೀದಿಗಿಳಿದು ದಂಗೆ ಏಳುವುದು ಮಾತ್ರ ಬಾಕಿದೆ. ಇದೇ ರೀತಿ ಕಳಪೆ ಕಾಮಗಾರಿಗಳು ನಡೆದುಕೊಂಡು ಹೋದರೆ ಅಧಿಕಾರಿಗಳಿಗೆ ನೀವು ಸಹಕಾರ ಕೊಟ್ಟುಕೊಂಡು ಬಂದರೆ, ಮುಂದೆ ತೊಂದರೆಯಾಗುತ್ತದೆ. ಆಗಾಗ್ಗೆ ಇದು ಬಿರುಕು ಬಿಡಲು ಕಾರಣವೇನು? ಮುಂದಿನ ಸ್ವಲ್ಪ ದಿವಸದಲ್ಲೇ 56-63ನೇ ಕಿಲೋ ಮೀಟರ್ ಪ್ರದೇಶಗಳಲ್ಲಿ ಯಾವುದೇ ಕ್ಷಣದಲ್ಲಿ ಬಿರುಕು ಬಿಡಬಹುದೆಂದು ಸುದ್ದಿ ನನಗೆ ಬಂದಿದೆ ಇದು ಸತ್ಯವೇ? ಹಾಗಿದ್ದರೆ ಅದನ್ನು ಸರಿ ಮಾಡುವುದಕ್ಕೆ ತಾವೇನು ಮಾಡುತ್ತೀರಿ? ಈ ವರ್ಷ ಬೆಳೆ ನಾಶವಾಗದ ಹಾಗೆ ನೀರನ್ನು ಕೊಡುತ್ತೇವೆ ಯಾರೂ ಚಿಂತಿತರಾಗುವ ಅವಶ್ಯಕತೆ ಇಲ್ಲ ಎನ್ನುವ ಆಶ್ವಾಸನೆಯನ್ನು ಕೊಡುತ್ತೀರಾ? ಇದರ ಬಗ್ಗೆ ಸ್ಪಷ್ಟೀಕರಣ ಕೇಳುತ್ತೇನೆ. ನಿಲುವಳಿ ಸೂಚನೆ ಮೂಲಕ ನಾವೇನು ಈಗ ಪ್ರಸ್ತಾಪ ಮಾಡಿದ್ದೇವೆ ಇದಕ್ಕೆ ವಿವರವಾಗಿ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟರೆ ಇನ್ನೂ ಅನೇಕ ಸಂಗತಿಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅನುಕೂಲವಾಗಬಹುದು, ಧನ್ಯವಾದಗಳು.

12.50 ಪಿ.ಎಂ.

+ ಡಾ: ಎ.ಬಿ. ಮಲಕಾ ರೆಡ್ಡಿ (ಯಾದಗೀರ್):- ಅಧ್ಯಕ್ಷರೇ, ಈಗಾಗಲೇ ಹಿರಿಯ ಸದಸ್ಯರು ಈ ವಿಷಯದ ಬಗ್ಗೆ ಸಾಕಷ್ಟು ವಿಷಯವನ್ನು ಹೇಳಿದ್ದಾರೆ. ನಿಲುವಳಿ ಸೂಚನೆ ಬಗ್ಗೆ ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಬಗ್ಗೆ ಹೇಳಿದ್ದಾರೆ. ನಾನು ಒಂದು ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಚ್ಛಿ-ಪಡುತ್ತೇನೆ. ಕಳೆದ ವಾರ ನಾನು ನನ್ನ ಕ್ಷೇತ್ರದಿಂದ ಬೆಂಗಳೂರಿಗೆ ಬರುತ್ತಿದ್ದೆ. ಯು.ಕೆ.ಪಿ.ಯಲ್ಲಿ ಕೆಲಸ ಮಾಡುತ್ತಿದ್ದ ಕಂಟ್ರಾಕ್ಟರ್ ಕೂಡ ರೈಲಿನಲ್ಲಿ ನಮ್ಮ ಜೊತೆ ಪ್ರಯಾಣ ಮಾಡುತ್ತಿದ್ದರು. ಅವರಿಗೂ ನನಗೂ ಪರಸ್ಪರ ಪರಿಚಯ ಮಾಡಿಕೊಟ್ಟರು. ನಾನು ಮದ್ರಾಸಿನವನು ಎಂದು ಹೇಳಿದ ಇಲ್ಲಿ ನಡೆ-ದಂಥ ಎಂದರೆ, ಯು.ಕೆ.ಪಿ ಯಲ್ಲಿ ನಡೆದಂತಹ ವೃತ್ತಾಂತಗಳು ಏನಿವೆ, ಯು.ಕೆ.ಪಿ.ಯಲ್ಲಿ ನಡೆಯು-ತ್ತಿರತಕ್ಕಂತಹ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಅವನಿಗೇ ಫೀಲಾಯಿತು. ನಾನು ನಿಮ್ಮ ಹೆಸರು ಕೇಳಿದ್ದೇನೆ. ಆದರೆ ಯು.ಕೆ.ಪಿ. ಪ್ರಾಜೆಕ್ಟಿನಲ್ಲಿ ಕೆಲಸ ಮಾಡತಕ್ಕಂತಹ ಸರಕಾರಿ ನೌಕರರು ಇಂಜಿನಿ-ಯರ್ಸ್ ಏನು ಇದ್ದಾರೆ, ಅವರು ಕರ್ನಾಟಕದವರೋ ಇಲ್ಲವೇ ಬೇರೆ ಪ್ರಾಂತ್ಯದಿಂದ ಬಂದವರೋ ಅಥವಾ ಬೇರೆ ದೇಶದಿಂದ ಬಂದವರೋ ಎಂದು ಕೇಳಿದ. ಏಕೆಂದರೆ ಅವನ ಜೊತೆ ಹೊಂದಾಣಿಕೆ ಮಾಡಿಕೊಂಡು ಕೆಲಸ ಮಾಡತಕ್ಕಂತಹವರಾಗಿದ್ದಾರೆ ಎಂದು ಅವನೇ ಹೇಳಿದ. ಅವನು ಕಂಟ್ರಾಕ್ಟರ್.

ಅಷ್ಟು ಫೀಲ್ ಆಗುತ್ತದೆ. ಇವರೆಲ್ಲ ಏನು ಇಂಜಿನಿಯರ್ಸ್ ಬಂದಿದ್ದಾರೆ ಇವರೆಲ್ಲ ಉತ್ತಮ ಗುಣಮಟ್ಟದ ಇಂಜಿನಿಯರ್ಸ್ ಅಲ್ಲ ಎಂದು ಹೇಳುತ್ತಾನೆ. ಒಳ್ಳೆಯ ಇಂಜಿನಿಯರ್ಸ್‌ಗಳು ಯಾರೂ ಅಲ್ಲಿಗೆ ಪೋಸ್ಟಿಂಗ್ಸ್ ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ಎಲ್ಲರೂ ಪ್ರಭಾವ ಉಪಯೋಗಿಸಿಕೊಂಡು ವರ್ಗಾವಣೆ ತೆಗೆದುಕೊಳ್ಳುತ್ತಾರೆ. ಅಲ್ಲಿ ಬರತಕ್ಕಂತಹ ಇಂಜಿನಿಯರ್ಸ್ ಕೆಳಮಟ್ಟದ ಇಂಜಿನಿಯರ್ಸ್. ಅಲ್ಲಿಗೆ ಬಂದಮೇಲೆ ಅವರೇನು ಕೆಲಸ ಮಾಡುತ್ತಾರೆ ಎಂದು ತಾವೇ ಊಹಿಸಿ. ಇದಕ್ಕೇನು ನಾನು ಸಲಹೆ ಕೊಡುತ್ತೇನೆ ಎಂದರೆ ತಕ್ಷಣ ಅಲ್ಲಿದ್ದಂಥವರನ್ನೆಲ್ಲಾ ಟ್ರಾನ್ಸ್‌ಫರ್ ಮಾಡಿ. ಕೋಟ್ಯಾಂತರ ರೂಪಾಯಿಗಳನ್ನು ತಾವು ಖರ್ಚು ಮಾಡುತ್ತಿದ್ದೀರಿ. ಒಳ್ಳೆಯ ಗುಣಮಟ್ಟದ ಕೆಲಸವಾಗುತ್ತಿಲ್ಲ. ಎಷ್ಟು ದಿವಸ ಈ ಕಾರ್ಯಕ್ರಮವನ್ನು ಇದೇ ರೀತಿ ಮಾಡುತ್ತೀರಿ? ಈ ರೀತಿ ಆದರೆ, ನೀವು ಸಾವಿರಾರು ಕೋಟಿ ರೂಪಾಯಿಗಳನ್ನು ಏನು ಖರ್ಚು ಮಾಡುತ್ತಿದ್ದೀರಿ, ಮತ್ತೆ ತಾವು ಪುನಃ ಅದೇ ಕೆಲಸಕ್ಕೆ ಇನ್ನೊಂದು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಆದರೂ ಕೂಡ ಈ ಕೆಲಸ ಉತ್ತಮವಾದ ಗುಣಮಟ್ಟದ ಕೆಲಸವಂತೂ ಆಗುವುದಿಲ್ಲ. ಉದಾಹರಣೆಗಾಗಿ ನಾನು ಹೇಳುತ್ತಿದ್ದೇನೆ. ಇದು ಲೈಟ್ ಇರಿಗೇಷನ್ ಪ್ರಾಜೆಕ್ಟ್. ಮಳೆಗಾಲದಲ್ಲಿ ಬೀಳುವ ಮಳೆ ಬಿದ್ದ ಮೇಲೆ ರೈತರು ಭೂಮಿಯನ್ನು ಊಳುತ್ತಾರೆ. ಒಂದು ವೇಳೆ ಮಳೆ ಬರದೇ ಇದ್ದಾಗ ನೀರಾವರಿಯಿಂದ ನೀರನ್ನು ಬಿಟ್ಟು, ಯೋಜನೆಗಳಿಂದ ನೀರನ್ನು ಬಿಟ್ಟು ರೈತರಿಗೆ ಕೊಟ್ಟು, ಬೆಳೆಗಳನ್ನು ಬೆಳೆಯುವುದಕ್ಕೆ ಅನುಕೂಲ ಮಾಡಿಕೊಡುವ ಒಂದು ಯೋಜನೆ. 22ನೇ ತಾರೀಖು ಮೀಟಿಂಗ್ ಮಾಡಿ ರೈತರಿಗೆ ನೀರನ್ನು ಬಿಡುಗಡೆ ಮಾಡಬೇಕು ಎಂದು ಹೇಳಿ ನಿರ್ಣಯವಾಯಿತು. ಅದರ ಪ್ರಕಾರ ಜೂನ್ 3ನೇ ತಾರೀಖು ನೀರನ್ನು ಬಿಟ್ಟರು. 3, 4 ಮತ್ತು 5 ರಂದು ನೀರನ್ನು ಬಿಟ್ಟರು. ಆಮೇಲೆ ಸಡನ್ ಆಗಿ ಬಂದ್ ಮಾಡಿಬಿಟ್ಟರು. ಜನರು ಬೆಳೆಯನ್ನು ಬಿತ್ತಿದ್ದರು, ಹೆಸರು ಬಿತ್ತಿದ್ದರು, ಶೇಂಗಾ ಬಿತ್ತಿದ್ದರು, ಮತ್ತು ಜೋಳ, ಸಜ್ಜೆ ಕೂಡ ಬಿತ್ತಿದ್ದರು. ನೀರನ್ನು ಒಮ್ಮೆಲೇ ಬಂದ್ ಮಾಡಿದರು. ಈಗ ಆ ಏರಿಯಾದಲ್ಲಿ ಅಂದರೆ ಸುರಪುರ್, ಶಹಾಪುರ, ಜೇವರ್ಗಿಯಲ್ಲಿ ಭೀಕರವಾದ ಬರಗಾಲ ಇದೆ. ಸುಮಾರು ತಿಂಗಳಿಂದ ಅಲ್ಲಿ ಮಳೆಯೇ ಇಲ್ಲ. ಆದರೆ ರೈತರು ಬೆಳೆಯನ್ನು ಏಕೆ ಬಿತ್ತಿದರು ಎಂದರೆ ನೀರಾವರಿ ಇದೆ, ಕಾಲುವೆ ಮುಖಾಂತರ ನಮಗೆ ನೀರು ದೊರಕುತ್ತದೆ ಎಂದು ಹೇಳಿ ಬೆಳೆಯನ್ನು ಬಿತ್ತಿದರು. ಒಮ್ಮಿಂದೊಮ್ಮೆಲೇ 5ನೇ ತಾರೀಖು ನೀರು ಬಿಡದೆ ಬಂದ್ ಮಾಡಿದವರು. ಇಷ್ಟರತನಕವೂ ನೀರೇ ಬಿಡಲಿಲ್ಲ. ಆಮೇಲೆ ಜನರು, ರೈತರು ಹಾಹಾಕಾರ ಮಾಡಿದರು. ಆ ರೀತಿ ಮಾಡಿದ ಮೇಲೆ ಅವರನ್ನು ಕೇಳಿದಾಗ ಎಲ್ಲೋ ಬಿರುಕು ಬಿಟ್ಟಿದೆ, ಅದಕ್ಕಾಗಿ ನೀರನ್ನು ಬಿಡುತ್ತಿಲ್ಲ ಎಂದು ಹೇಳಿದರು. ನಮ್ಮ ಮಿತ್ರರು ಹೇಳಿದಂತೆ ಕೇವಲ ಮೂರು ಸಾವಿರ ಕ್ಯೂಸೆಕ್ಸ್ ನೀರನ್ನು ಬಿಟ್ಟಿದ್ದುದು. ಹತ್ತು ಸಾವಿರ ಕ್ಯೂಸೆಕ್ಸ್ ನೀರನ್ನು ಹರಿಯಬಿಡುವ ಶಕ್ತಿಯುಳ್ಳ ಕಾಲುವೆಯಲ್ಲಿ ಕೇವಲ ಮೂರು ಸಾವಿರ ಕ್ಯೂಸೆಕ್ಸ್ ನೀರನ್ನು ಬಿಟ್ಟರೂ ಕೂಡ ಅಲ್ಲಿ ಬಿರುಕು ಬಿಟ್ಟಿತು ಎಂದು ಹೇಳಿದರು. ನೀರು ಲೀಕೇಜ್ ಆಯಿತು ಎಂದು ಹೇಳಿದರು. ಆಮೇಲೆ ಪುನಃ ಜನರು ಹಾಹಾಕಾರ ಮಾಡಿದ ಮೇಲೆ ಅಲ್ಪಸ್ವಲ್ಪ ಅದನ್ನು ಯಾವ ರೀತಿ ರಿಪೇರಿ ಮಾಡಿದರೋ ಗೊತ್ತಿಲ್ಲ. ಮತ್ತೆ ಆಗಸ್ಟ್ 1ನೇ 2ನೇ

ತಾರೀಖು ಪುನಃ ನೀರನ್ನು ಬಿಟ್ಟರು. ಪುನಃ ಮತ್ತೆ ಈಗ ಬಂದೇ ಮಾಡಿದ್ದಾರೆ. ಆಗಸ್ಟ್ 1, 2ನೇ ತಾರೀಖು ನೀರನ್ನು ಬಿಟ್ಟಮೇಲೆ ಹತ್ತಿ ಬೆಳೆಯ- ತಕ್ಕಂಥವರು ಏನು ಮಾಡಿದರು ಎಂದರೆ ಅವರು ಹತ್ತಿ ಬಿತ್ತಿ ಬಿಟ್ಟರು. ಈಗ ಏಪ್ರಿಲ್ ತಿಂಗಳಲ್ಲಿ ಬೆಳೆ ಬಂದಿದೆ. ಈಗ ಬೆಳೆಯೂ ಒಣಗತಕ್ಕಂಥ ಪರಿಸ್ಥಿತಿ ಇದೆ. ಮತ್ತು ಈಗಾಗಲೇ ಅಲ್ಲಿ ನಿಂತ ಬೆಳೆ ಏನು ಇದೆ, ಶೇಂಗಾ ಮತ್ತು ಹೆಸರು ಅದೆಲ್ಲಾ ಈಗ ಬಾಡಿದೆ. ಇದಕ್ಕೆ ಪರಿಹಾರವೇನು? ನಮ್ಮ ಮಿತ್ರರು ಹೇಳಿದ ಹಾಗೆ 40 ಕೋಟಿ ರೂಪಾಯಿ ಬರೀ ಓ ಅಂಡ್ ಎಂ ಎಂದರೆ ಹೇಗೆ? ಎಲ್ಲಾ ಪ್ರಾಜೆಕ್ಟ್ ಮಾಡಿ ಸುಮ್ಮನೆ ಹಳ್ಳಿ ಹಳ್ಳಿ ತಿರುಗಾಡಿ ಒಂದು ಟ್ರಂಕಿನಲ್ಲಿ ಹಣ ಇಟ್ಟುಕೊಂಡು ಹಣ ಹಂಚಿಕೊಂಡು ಹೋದರೆ ಒಂದು ರೀತಿ ಅದೂ ಕೂಡ ಚೆನ್ನಾಗಿ ಆಗುತ್ತದೆ. ಈ ಓ ಅಂಡ್ ಎಂ ಎಂದರೆ ಏನಾಗಿದೆ ಪ್ರತಿಯೊಂದು ಊರಿನಲ್ಲಿ 30-40 ಜನ ಕಂಟ್ರಾಕ್ಟರ್ ತಯಾರಾಗಿದ್ದಾರೆ. ನಮಗಂತೂ ನಮ್ಮ ತಾಲ್ಲೂಕಿನಲ್ಲಿ ಇರಲಿಕ್ಕೆ ಸಾಧ್ಯವಿಲ್ಲದಂತಾಗಿದೆ. ಸಾರ್, ಒಂದು ಲೆಟರ್ ಇಂಜಿನಿಯರಿಗೆ ಕೊಡಿ ನಮಗೆ ಓ ಅಂಡ್ ಎಂ ಕೆಲಸ ಸಿಗುತ್ತದೆ ಎನ್ನುತ್ತಾರೆ. ಏಕೆಂದರೆ ಅಲ್ಲಿ ಆಗುವ ಕೆಲಸವೇ 30 ಪರ್‌ಸೆಂಟ್ ಆಗುತ್ತದೆ. 70 ಪರ್‌ಸೆಂಟ್ ಉಳಿಯುತ್ತದೆ. ಅದೊಂದು ಈಗ ಉದ್ಯೋಗವಾಗಿಬಿಟ್ಟಿದೆ. ನನ್ನ ಕ್ಷೇತ್ರಕ್ಕೆ ಶಹಾಪುರ್, ಯಾದಗೀರ್ ತಾಲ್ಲೂಕುಗಳ ಕೆಲವು ಹಳ್ಳಿಗಳು ಬರುತ್ತವೆ. ಅವುಗಳು ಟರ್ಮಿನಲ್ ವಿಲೇಜಸ್. ಅಲ್ಲಿ ಎಲ್ಲೆಲ್ಲಿ ನೀರಾವರಿ ಬಿಟ್ಟು ಬೆಳೆ ಬಂದಿಲ್ಲ, ಅಲ್ಲೆಲ್ಲ ಓ ಅಂಡ್ ಎಂ ಕೆಲಸ ಕಾಲುವೆಯೊಳಗೆ ಮಾಡುವುದಕ್ಕೆ ಖರ್ಚಾದಂಥ ಹಣ ಅದಕ್ಕಿಂತ ಹೆಚ್ಚು ಹಣ ಓ ಅಂಡ್ ಎಂ. ನಲ್ಲಿ ಖರ್ಚಾಗುತ್ತಿದೆ. ಅದರ ಕಡೆ ಯಾರೂ ಲಕ್ಷ್ಯವಹಿಸುತ್ತಿಲ್ಲ. ಸುಮಾರಾಗಿ ನಾನೇ ದೊಡ್ಡ- ದಾಗಿ ಡಿಟೈಲ್ ಆಗಿ ಸರ್ಕಾರಕ್ಕೆ ಹೋದ ವರ್ಷ ಕಾಗದವನ್ನು ಬರೆದಿದ್ದೇನೆ. ಅದರ ಬಗ್ಗೆ ತಪಾಸಣೆ ಕೂಡ ಇಲ್ಲ. ಅದಕ್ಕಾಗಿ ರೈತರು ಈ ರೀತಿ ಬವಣೆಯನ್ನು ಎದುರಿಸುವ ಒಂದು ಪರಿಸ್ಥಿತಿ ನಿರ್ಮಾಣ- ವಾಗಿದೆ. ಅದಕ್ಕೆ ತಮ್ಮಲ್ಲಿ ನಿವೇದಿಸಿಕೊಳ್ಳುವುದೇನೆಂದರೆ ಸರ್ಕಾರದವರು ತಕ್ಷಣ ಎಲ್ಲೆಲ್ಲಿ ಏನೇನು ಡ್ಯಾಮೇಜ್ ಆಗಿದೆ, ಅದನ್ನು ರಿಪೇರಿ ಮಾಡಿಸಿ. ಇದು ಏನಾಗುತ್ತದೆ ಎಂದರೆ ಇದರಿಂದ ಸುಮಾರು ನಾಲ್ಕೈದು ಕೋಟಿ ರೂಪಾಯಿ ಬೆಳೆ ಹಾಳಾಗುತ್ತದೆ. ಆ ಬೆಳೆಗಳಿಗೆ ನೀರನ್ನು ಬಿಡುವ ವ್ಯವಸ್ಥೆಯನ್ನು ಮಾಡಬೇಕು. ಇನ್ನು ಅನೇಕ ವಿವರಗಳು ನಮ್ಮಲ್ಲಿ ಇವೆ, ನಿಲುವಳಿ ಸೂಚನೆಗೆ ತಾವು ಅನುಮತಿ- ಯನ್ನು ಕೊಟ್ಟಿದ್ದಾದರೆ, ಇನ್ನುಳಿದ ವಿವರಗಳನ್ನು ತಮ್ಮುಂದೆ ಇಡುವುದಕ್ಕೆ ನಾನು ಸಿದ್ಧನಿದ್ದೇನೆ.

ಶ್ರೀ ಸಿ.ಹೆಚ್. ವಿಜಯಶಂಕರ್:- ಮಾನ್ಯ ಉಪಾಧ್ಯಕ್ಷರೇ . . .

ಉಪಾಧ್ಯಕ್ಷರು:- ನಿಮಗೇನು ಸಂಬಂಧ ಇದೆ? ಈಗಾಗಲೇ ನಿಮ್ಮ ನಾಯಕರು ಮಾತ- ನಾಡಿದ್ದಾರೆ.

ಶ್ರೀ ಸಿ.ಹೆಚ್. ವಿಜಯಶಂಕರ್:- ಅವರಿಗೆ ಸಂಬಂಧಪಟ್ಟಿರುವ ವಿಚಾರವೇ. ಒಂದು ನಿಮಿಷ- ದಲ್ಲಿ ಮುಗಿಸುತ್ತೇನೆ. ಈ ನೀರಾವರಿ ಇಲಾಖೆ ಏನಿದೆ, ಸನ್ಮಾನ್ಯ ಸಚಿವರ ಬಗ್ಗೆ ಅಪಾರವಾದ ಗೌರವ ಇದೆ. ಇದರ ಜೊತೆಯಲ್ಲಿ ಸಂಘರ್ಷಣೆ ಪ್ರಾರಂಭವಾಗಬೇಕಾಗುತ್ತದೆ. ನೀರಾವರಿ ಇಲಾಖೆ ಪರ್- ಸೆಂಟೇಜ್ ಇಲಾಖೆಯಾಗಿಬಿಟ್ಟಿದೆ. ಇದನ್ನು ಸರಿಪಡಿಸುವುದಕ್ಕೆ ನೀವು ಯಾವ ರೀತಿ ಕ್ರಮ ತೆಗೆದು-

ಕೊಳ್ಳುತ್ತೀರಿ, ನಿಮ್ಮ ಅವಧಿಯಲ್ಲಿ ಅದನ್ನು ದಯವಿಟ್ಟು ಯೋಚನೆ ಮಾಡಿ. ಎರಡನೆಯದಾಗಿ ನೀರಾವರಿ ಸಲಹಾ ಸಮಿತಿ ಸಭೆ ಹಾರಂಗಿ ವಿಚಾರದಲ್ಲಿ ಕಳೆದ ತಿಂಗಳು 27ನೇ ತಾರೀಖು ಸೇರಿ, ಹತ್ತನೇ ತಾರೀಖಿಗೆ ನೀರನ್ನು ಬಿಡಬೇಕು ಎಂದು ಆಗಿದ್ದು, ಈ ತಿಂಗಳು 1ನೇ ತಾರೀಖು, 2ನೇ ತಾರೀಖಿಗೂ ಹಾರಂಗಿ ನೀರು ನಮ್ಮ ಭಾಗಕ್ಕೆ ಬರಲಿಲ್ಲ. ಹಾರಂಗಿ ನೀರು ನಮ್ಮ ಭಾಗದ ರೈತರಿಗೆ ಸಿಗಲಿಲ್ಲ. ಈಗ ಮೊನ್ನೆ ಬಿಟ್ಟಿದ್ದಾರೆ ಅದು ಎರಡೇ ದಿವಸ. ಮತ್ತೆ ನೀರು ನಿಂತುಹೋಯಿತು. ಕಳೆದ ತಿಂಗಳು 10ನೇ ತಾರೀಖಿಗೆ ನೀರನ್ನು ಬಿಡಬೇಕು ಎಂದು ಹೇಳಿದ್ದು ಈ ತಿಂಗಳ 10ನೇ ತಾರೀಖು ಬಂದರೂ ನಮ್ಮ ಭಾಗಕ್ಕೆ ನೀರು ಬರಲಿಲ್ಲ ಎಂದರೆ ಯಾವ ಮಟ್ಟದಲ್ಲಿ ಅಧಿಕಾರಿಗಳು ವರ್ತನೆ ಮಾಡುತ್ತಾರೆ? ಯಾವ ಮಟ್ಟದಲ್ಲಿ ಅವರ ವಿಚಾರ ಇದೆ? ಯಾವ ಮಟ್ಟದಲ್ಲಿ ಕೆಲಸಕಾರ್ಯ-ಗಳಾಗುತ್ತವೆ ಎಂದು ಅರ್ಥವಾಗುವುದಿಲ್ಲ. ಈ ವ್ಯವಸ್ಥೆಯನ್ನು ಯಾವ ರೀತಿ ಸರಿಪಡಿಸುತ್ತೀರಿ ಎನ್ನುವುದನ್ನು ತಾವು ಹೇಳಬೇಕು.

ಉಪಾಧ್ಯಕ್ಷರು:- ತಾವು ಭಾಷಣ ಮಾಡುವ ಹಾಗೆ ಇಲ್ಲ. ಮಾನ್ಯ ನೀರಾವರಿ ಸಚಿವರು ಉತ್ತರ ಕೊಡಲಿ.

+ ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು):- ಮಾನ್ಯ ಉಪಾಧ್ಯಕ್ಷರೇ, ನೀರು ಕೊಡುವುದಕ್ಕೆ ಪ್ರತ್ಯೇಕವಾಗಿ ಅಚ್ಚುಕಟ್ಟು ಏರಿಯಾದಲ್ಲಿ ನಾವು ಇರಿಗೇಷನ್ ಕನ್‌ಸಲ್-ಟೇಟಿವ್ ಕಮಿಟಿಯನ್ನು ಮಾಡಿದ್ದೇವೆ. ಆ ಕಮಿಟಿಯಲ್ಲಿ ಶಾಸಕರು ಇದ್ದೀರಿ. ಯಾವ ದಿನ ನೀರನ್ನು ಬಿಡಬೇಕು, ಯಾವ ಅಚ್ಚುಕಟ್ಟಿಗೆ ಎಷ್ಟು ನೀರು ಬಿಡಬೇಕು, ಎಷ್ಟು ಕ್ಯೂಸೆಕ್ಸ್ ನೀರನ್ನು ಬಿಡಬೇಕು ಎಂದು ತಾವು ಆ ಕನ್‌ಸಲ್‌ಟೇಟಿವ್ ಕಮಿಟಿಯಲ್ಲಿ ತೀರ್ಮಾನ ಮಾಡಿಕೊಳ್ಳುವುದಕ್ಕೆ ತಮಗೆ ಅಧಿಕಾರವನ್ನು ಕೊಟ್ಟಿದ್ದೇವೆ. ಸರ್ಕಾರದಿಂದ ನಾವು ಯಾವುದೇ ರೀತಿಯ ನಿರ್ದೇಶನವನ್ನೂ ಯಾವುದೇ ಅಚ್ಚುಕಟ್ಟಿಗೂ ಸಹಾ ಕೊಡುವುದಿಲ್ಲ. ಮಾನ್ಯ ವಿಜಯಶಂಕರ್‌ರವರಿಗೆ ಇದು ಗೊತ್ತಿದೆ ಎಂದು ಕಾಣುತ್ತದೆ. ಅಕಸ್ಮಾತ್ ಅದನ್ನು ಅವರು ಮಾಡದೇ ಇದ್ದರೆ ನಾನು ಖಂಡಿತಾ ಚೀಫ್ ಇಂಜಿನಿಯರ್ ಅವರನ್ನು ಕರೆಯಿಸಿ ಹೇಳುತ್ತೇನೆ. ಏತಕ್ಕೆ ನೀರನ್ನು ನಿಲ್ಲಿಸಿದರು ಎಂದು ಕೇಳುತ್ತೇನೆ. ಈಗ ಇರುವ ವಿಚಾರ ನಮ್ಮ ನಾರಾಯಣಪುರದ ಎಡದಂಡೆಯ ಕಾಲುವೆ ಉದ್ದ ಇವತ್ತಿನ ದಿವಸ 70 ಕಿಲೋ ಮೀಟರ್ ಇರುವುದು. ಅದು ಸುಮಾರು 47,233 ಹೆಕ್ಟೇರ್ ನೀರಾವರಿ ಪ್ರದೇಶವನ್ನು ಹೊಂದಿದ್ದು ಈ ಸಾರಿ ನಾವು 49,910 ಹೆಕ್ಟೇರ್‌ಗಳಿಗೆ ಸುಮಾರು ಕಾಲುವೆಗಳಲ್ಲಿ ನಾಲ್ಕು ಶಾಖಾ ಕಾಲುವೆಗಳಲ್ಲಿ ಮಾಡುತ್ತಿದ್ದೇವೆ. ನಾನು ಡಿಟೈಲ್ಸ್‌ಗೆ ಹೋಗುವುದಕ್ಕಿಂತ ಶಹಾಪುರ ಶಾಖೆ ಇರಲಿ ಅಥವಾ ಮುಡುಬಾಳ ಇರಲಿ, ಇಂಡಿ ಇರಲಿ, ಜೇವರ್ಗಿ ಇರಲಿ, ಇವಿಷ್ಟನ್ನೂ ಸಹಾ ನಾನು ಈಗಾ-ಗಲೇ ನೋಡಿದ್ದೇನೆ. ಹೋಗಿ ಎಲ್ಲಾ ಕಡೆ ಈ ಪ್ರದೇಶಗಳನ್ನು ನೋಡಿಕೊಂಡು ಬಂದಮೇಲೆ ಸ್ವಲ್ಪ ನಾವು ಸೀರಿಯಸ್ ಆಗಿ ಮಾನ್ಯ ಯಡಿಯೂರಪ್ಪನವರು, ಖರ್ಗೆಯವರು ಹಾಗೂ ಶ್ರೀರಾಮರೆಡ್ಡಿ ಯವರು ಹೇಳಿದಂತೆ ಸ್ವಲ್ಪ ಸೀರಿಯಸ್ ಆಗಿ ಯೋಚನೆ ಮಾಡಬೇಕಾದಂಥ ಪ್ರಸಂಗ ಬಂದಿದೆ. ಅದರಲ್ಲಿ ಎರಡನೇ ಮಾತಿಲ್ಲ. ಆದರೆ ಈ ನಾರಾಯಣಪುರ ವಿಚಾರಕ್ಕೆ ಬಂದರೆ ಹತ್ತು ಸಾವಿರ

ಕ್ಯೂಸೆಕ್ಸ್‌ಗೆ ಇದನ್ನು ಡಿಜೈನ್ ಮಾಡಿರುವುದು. ಈಗ ಮೂರುಸಾವಿರ ಕ್ಯೂಸೆಕ್ಸ್ ಇದ್ದಾಗ 90ನೇ ಇಸವಿಯಿಂದ 96ನೇ ಇಸವಿಗೆ ಸುಮಾರು ನಾಲ್ಕೈದು ಕಡೆ ಒಡೆದುಹೋಗಿರುವ ಬಗ್ಗೆ ಅವರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಅದು ನಿಜ ಇದೆ, ಶ್ರೀರಾಮರೆಡ್ಡಿಯವರು ಹೇಳಿದ್ದು ನಿಜ ಇದೆ. ಮಾನ್ಯ ಖರ್ಗೆಯವರು, ಮಲಕರೆಡ್ಡಿಯವರು ಹೇಳಿದ್ದೂ ನಿಜ ಇದೆ. ಇದರಲ್ಲಿ ಸುಮಾರು ಎಂಟು ವರ್ಷದ ಹಿಂದೆ ಈ ಕೆನಾಲ್‌ಗೆ ನಾವು ಸರ್ವೀಸನ್ನು ಕೊಟ್ಟಬ್ಬೇವೆ. ಎಂಟು ವರ್ಷಗಳ ಹಿಂದೆ ನಾವು ಸರ್ವೀಸ್‌ನ್ನು ಕೊಟ್ಟಮೇಲೆ, ಸುಮಾರು ನಾಲ್ಕು ಸಾರಿ ಒಡೆದುಹೋಗಿರುವುದು ನಮ್ಮ ಗಮನಕ್ಕೆ ಬಂದಿದೆ, ರಿಪೇರಿಯನ್ನು ಮಾಡಿದ್ದಾರೆ. ಆದರೆ ಇವತ್ತು ಇಡೀ ಅಚ್ಚುಕಟ್ಟಿನಲ್ಲಿ ಈ ಭಾಗಕ್ಕೆ ನಾವೇನು ನೀರನ್ನು ಕೊಡಬೇಕು ಎಂದು ಹೇಳಿ ನಾವು ಮಾಡಿದಷ್ಟು ಪ್ರಮಾಣದಲ್ಲಿ ಕ್ವಾಲಿಟಿ ಆಫ್ ವರ್ಕ್ ಆಗಿಲ್ಲ ಎನ್ನುವ ಮಾತನ್ನು ಅವರು ಹೇಳಿರುವುದನ್ನು ನಾನು ಗಮನಿಸಿದ್ದೇನೆ. ನಾನು ಎಲ್ಲವನ್ನೂ ಹೇಳುವುದಕ್ಕೆ ಬದಲಾಗಿ, ಅವರು ಹೂಳು ತೆಗೆಸುವುದಕ್ಕೆ 95ನೇ ಇಸವಿಯಲ್ಲಿ 18 ಕೋಟಿ ರೂಪಾಯಿ ಖರ್ಚಾಗಿದೆ ಎಂದು ಹೇಳಿದ್ದಾರೆ. 1996-97ರಲ್ಲಿ 21 ಕೋಟಿ ರೂಪಾಯಿಗಳ ಅಂದಾಜು ವೆಚ್ಚವನ್ನು ಮಾಡಿದ್ದಾರೆ ಎಂದು ಹೇಳಿದ್ದಾರೆ. ಮಾನ್ಯ ಖರ್ಗೆಯವರು ಲೋ ಕ್ವಾಲಿಟಿ ಆಫ್ ವರ್ಕ್ ಆಗಿದೆ ಎಂದು ಹೇಳಿದ್ದಾರೆ. ಮಾನ್ಯ ಮಲಕರೆಡ್ಡಿಯವರು ಅಲ್ಲಿರುವ ಇಂಜಿನಿಯರ್-ಗಳನ್ನು ಟ್ರಾನ್ಸ್‌ಫರ್ ಮಾಡಬೇಕು, ಅಲ್ಲಿ ಸರಿಯಾದ ಇಂಜಿನಿಯರುಗಳು ಇಲ್ಲ ಎನ್ನುವ ಮಾತನ್ನು ಹೇಳಿದ್ದಾರೆ, ಮಾನ್ಯ ಯಡಿಯೂರಪ್ಪನವರೂ ಸಹ ಅಲ್ಲಿ ಕೆಲಸ ಸರಿಯಾಗಿ ಆಗಿಲ್ಲ. ಇದರಿಂದ ನಾರಾಯಣಪುರದ ಡ್ಯಾಮ್‌ನ ಪ್ರಶ್ನೆ ಇದೆ. ಅದನ್ನು ನೀವು ಟೆಸ್ಟ್ ಮಾಡಬೇಕು ಎಂದು ಹೇಳಿದರು. ನಾನು ಸೂಕ್ಷ್ಮವಾಗಿ ಹೇಳುವುದಾದರೆ ಅವರೇನು ಸಲಹೆಯನ್ನು ಕೊಟ್ಟಿದ್ದಾರೆ, ಕೆ.ಸಿ. ರೆಡ್ಡಿಯವರ ಟೆಕ್ನಿಕಲ್ ಕಮಿಟಿಗೆ ಇದನ್ನು ರೆಫರ್ ಮಾಡಿ, ಎಂಟೈರ್ ಆ ಕೆನಾಲ್‌ನ್ನು ಇನ್ನೂ ಸ್ಟ್ರೆಂಗ್ತನ್ ಮಾಡು-ವುದರಿಂದ ಹಿಡಿದು ಅದು ಏತಕ್ಕೆ ಒಡೆದು ಹೋಯಿತು ಎಂದು ಇನ್‌ವೆಸ್ಟಿಗೇಷನ್ ಮಾಡುವುದ-ರಿಂದ ಹಿಡಿದು, ಆ ಬಿಲ್‌ನ್ನು ಏನು ಮಾಡಿದ್ದಾರೆ, ಅದನ್ನು ಹಾಗೂ ಎಂಟೈರ್ ಮ್ಯಾಟರನ್ನು ನಾನು ಕೆ.ಸಿ. ರೆಡ್ಡಿಯವರ ಕಮಿಟಿಗೆ ರೆಫರ್ ಮಾಡಿಸುತ್ತೇನೆ. ಟೋಟಲ್ ಬಿಲ್ಸ್ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡುವುದು ಒಂದು ಟರ್ಮ್ಸ್ ಆಫ್ ರೆಫರೆನ್ಸ್; ಎರಡನೆಯದು ಆ ಕೆನಾಲ್ 78 ಕಿಲೋ ಮೀಟರ್ ಏನಿದೆ, ಅದು ಎಂಟತ್ತು ವರ್ಷದಿಂದ ಆಗಿರುವುದರಿಂದ ಅದು ಲೋ ಕ್ವಾಲಿಟಿ ಆಗಿರುವು-ದರಿಂದ ಆ ಕ್ವಾಲಿಟಿಯನ್ನೂ ಸಹಾ ನೋಡಿ ಅದನ್ನು ತುಂಗಭದ್ರಾ ರೀತಿ ಸ್ಟ್ರೆಂತನ್ ಮಾಡಬೇಕಾಗಿದೆ. ಖರ್ಗೆಯವರು ತುಂಗಭದ್ರಾ ಒಡೆದುಹೋಯಿತು ಎಂದು ಹೇಳಿದಿರಿ, ಈಗ ಒಡೆದುಹೋಗಿರುವುದು ಇನ್ನು ಸ್ಟ್ರೆಂತನ್‌ಗೆ ತೆಗೆದುಕೊಂಡಿರುವ ವರ್ಕ್‌ಲ್ಲ. ಕೆಲಸ ಮಾಡದೇ ಇರುವುದು ಒಡೆದುಹೋಗಿರು-ವುದು. ಈ ರೀತಿಯಾಗಿರುವ ವಿಚಾರದಲ್ಲಿ ಕೆ.ಸಿ. ರೆಡ್ಡಿ ಕಮಿಟಿಗೆ ಇದನ್ನು ಖಂಡಿತಾ ರೆಫರ್ ಮಾಡು-ತ್ತೇನೆ. ಇನ್ನು ಡಿಸೈನ್ ಮಾಡಿರುವುದು ಸರಿಯಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಆ ಡಿಸೈನ್ ಎಲ್ಲಿ ಡಿಫೆಕ್ಟ್ ಇದೆ, ಆ ಡಿಸೈನ್‌ಗೆ ಏನು ಮಾಡಬೇಕು? ಆ ಹತ್ತು ಸಾವಿರ ಕ್ಯೂಸೆಕ್ಸ್ ಅನ್ನು ಆ ಕೆನಾಲ್ ರಿಸೀವ್ ಮಾಡಿಕೊಂಡು ನಾಲ್ಕೂವರೆ ಲಕ್ಷ ಹೆಕ್ಟೇರ್‌ಗೆ ನಾವು ನೀರನ್ನು ಕೊಡಬೇಕಾಗಿರುವುದರಿಂದ,

ಆ ಮೂರೂ ಬ್ರಾಂಚಸ್‌ಗೆ ನೀರು ಕೊಡಬೇಕಾಗಿರುವುದರಿಂದ, ಅದನ್ನು ಮಾಡುತ್ತೇವೆ. ಅದು ಬಹಳ ಮೇನ್ ಕೆನಾಲ್. ನಾವು ಹೋಗಿ ನೋಡಿದ್ದೇವೆ. ಎಂಟು ಹತ್ತು ವರ್ಷ ಆಗಿರುವುದರಿಂದ ಲೋ ಕ್ವಾಲಿಟಿ ಆಫ್ ವರ್ಕ್ ಎಂದು ಮಾನ್ಯ ಖರ್ಗೆಯವರು ಪ್ರಸ್ತಾಪ ಮಾಡಿದ್ದಾರೆ. ನಮ್ಮಲ್ಲಿ ಕಮಿಟಿ ಒಳಗಡೆ ಸಾಯಿಲ್ ಎಕ್ಸ್‌ಪರ್ಟ್ ಇದ್ದಾರೆ ಇರಿಗೇಷನ್ ಚೀಫ್ ಇಂಜಿನಿಯರ್ ಸಹ ಕಮಿಟಿ ಒಳಗಡೆ ಇದ್ದಾರೆ ಮತ್ತು ಕೆ.ಸಿ. ರೆಡ್ಡಿಯವರು ಸಹ ಅಲ್ಲಿ ಕೆಲಸ ಮಾಡುವುದರಿಂದ ಅವರು ಸಜೆಸ್ಟ್ ಮಾಡಿದ ಪ್ರಕಾರ, ನಮ್ಮ ಕೆ.ಸಿ. ರೆಡ್ಡಿಯವರ ತಾಂತ್ರಿಕ ಮಂಡಲಿ ಏನು ಇದೆ, ಅದಕ್ಕೆ ರೆಫರ್ ಮಾಡುತ್ತೇವೆ. ತಾವೇನು ನಾರಾಯಣ ಪುರ ಡ್ಯಾಮ್ ವಿಚಾರ ಹೇಳಿದ್ದೀರಿ, ನಾನು ಅಲ್ಲಿಗೆ ಹೋದಾಗ ಒಂದು ವಿಚಾರ ಅವರು ಹೇಳಿದ್ದಾರೆ. ಅಲ್ಲಿ ಸೀಪೇಜ್ ಗೇಟ್‌ಗಳಲ್ಲಿ ವಾಟರ್ ಜಾಸ್ತಿ ಹೋಗುತ್ತಿದೆ ಅದನ್ನು ನೋಡಿ ಎಂದು ಹೇಳಿದರು. ನಾನು ಅಲ್ಲಿಯೇ ಇದ್ದಂತಹ ಇಂಜಿನಿಯರ್ಸ್‌ಗೆ ಹೇಳಿದಾಗ ಗೇಟ್‌ನಲ್ಲಿ ಹೋಗತಕ್ಕಂಥ seapage when compared with other dams it is better ಎನ್ನತಕ್ಕ ಒಂದು ವರ್ಷನ್ ಹೇಳಿದರು. ಆದರೆ ನೀವೂ ಹೇಳಿದ್ದೀರಿ. ಆ ಪ್ರಶ್ನೆ ಬಗ್ಗೆ ಈಗಾಗಲೇ ಎರಡು ಮೂರು ಸಾರಿ ವೆರಿಫೈ ಮಾಡಿದ್ದಾರೆ. ನಾನು ಇನ್ನೂ ಒಂದು ಸಾರಿ ಹೇಳುತ್ತೇನೆ. ತಾಂತ್ರಿಕ ಸಮಿತಿ ಇರುವುದರಿಂದ ತೊಂದರೆ ಇಲ್ಲ, ಕಾಷನ್ ತೆಗೆದುಕೊಳ್ಳುವುದರಿಂದ ಏನೂ ತೊಂದರೆ ಆಗುವುದಿಲ್ಲ. ನಾರಾಯಣಪುರ ಡ್ಯಾಮ್‌ಗೆ inner strengthen works, low quality investigation ಮತ್ತು excess billನ್ನು 1995-96ಕ್ಕೆ ಮಾಡಿದ್ದಾರೆ ಎನ್ನುವುದು ಒಂದು ವಿಚಾರ. ಇಷ್ಟನ್ನೂ ಸಹ ಮಾನ್ಯ ಖರ್ಗೆಯವರು ಸಜೆಸ್ಟ್ ಮಾಡಿದಂತಹ ಕಮಿಟಿಗೆ ರೆಫರ್ ಮಾಡುತ್ತೇನೆ. ಈಗೇನು ಒಡೆದು ಹೋಗಿದೆ, ಅದು ಬಹುಶಃ ಇವತ್ತು ಅಥವಾ ನಾಳೆ ಮಾತಲ್ಲ. ಅಲ್ಲೇನು ಆಗಿದೆ ಎಂದರೆ low quality of work ಬಗ್ಗೆ ಎರಡನೇ ಮಾತೇ ಇಲ್ಲ. ಕೆಳಗಡೆ ಬೇಸ್‌ನಲ್ಲಿ ಮಾಡಿದ್ದಾರೆ. ಆ ಬೇಸ್‌ನಲ್ಲೂ ಒಂದು ಕಿಲೋ ಮೀಟರ್ ಒಂದು ಸಾರಿ ಕೆಲಸ ಮಾಡಿದ್ದಾರೆ. ನಾನು ರಿಪೋರ್ಟ್ ನೋಡಿದೆ. ಟೆಕ್ನಿಕಲ್ ಕಮಿಟಿ ರಿಪೋರ್ಟ್ ತರಿಸಿ ನಾನು ಇಂಜಿನಿಯರ್ಸ್ ಹತ್ತಿರ ಡಿಸ್ಕಸ್ ಮಾಡಿದಾಗ "Heavy leakage observed today morning from the Bed of Canal through the MCRPC in one pipe on S.R. Side at KM 67.3 of KLBC. The water in KLBC is reduced from 3,000 Cusecs to 1,000 Cusecs. Repairs of the damaged pipes will be taken up immediately ಎಂದು ಹೇಳಿದ್ದಾರೆ. ಇವತ್ತು ಅಥವಾ ನಾಳೆ ವರ್ತಮಾನದ ಪ್ರಕಾರ ರಿಪೇರ್ಸ್ ರೆಡಿ ಆಗಬಹುದು. ಈಗ ಅವರು ಹೇಳಿದ ಹಾಗೆ ಒಂದು ರಿಪೇರಿ ಅಲ್ಲ, ಬಹಳ ಇವೆ. ಹತ್ತು ಸಾವಿರ ಕ್ಯೂಸೆಕ್ಸ್ ರಿಸೀವ್ ಮಾಡತಕ್ಕ ಕೆನಾಲ್. ಅದರಿಂದ ಇದಕ್ಕೆ ಥರೋ ಟೆಕ್ನಿಕಲ್ ಇನ್‌ವೆಸ್ಟಿಗೇಷನ್ ಆಗಬೇಕಾಗುತ್ತದೆ. ಕ್ವಾಲಿಟಿ ಇನ್‌ವೆಸ್ಟಿಗೇಷನ್ ಆಗಬೇಕಾಗುತ್ತದೆ. ಅದರ ರಿಪೇರಿ ಬಗ್ಗೆ ಇನ್ನರ್ ಸ್ಟ್ರೆಂಗ್ತನ್ ಮಾಡಬೇಕಾಗುತ್ತದೆ. ಇಷ್ಟನ್ನು ಅವರು ಸಲಹೆ ಮಾಡಿದಂತೆ ಕಮಿಟಿಗೆ ರೆಫರ್ ಮಾಡಿದ್ದೇವೆ. ಹಣ ದುರುಪಯೋಗ ಆಗಿರತಕ್ಕ ವಿಚಾರ, ಮೂರು ನಾಲ್ಕು ಪಾಯಿಂಟ್ ಸಹ ಅವರು ಸಜೆಸ್ಟ್ ಮಾಡಿದಂತೆ ಇನ್‌ವೆಸ್ಟಿಗೇಷನ್‌ಗೆ ಆ ಕಮಿಟಿಗೆ ರೆಫರ್ ಮಾಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ನೀವು ಹೇಳಿದ್ದೀರಿ. ಎರಡು ಮುಖ್ಯ ಪಾಯಿಂಟ್ ಏನು ಇದೆ ಎಂದರೆ 1990ನೇ ಇಸವಿಯಿಂದ 1996ನೇ ಇಸವಿಯವರೆಗೆ ಕೆನಾಲ್ ನಾಲ್ಕು ಸಾರಿ ಒಡೆದಿದ್ದು ಈಗ ಐದನೆಯ ಸಾರಿ ಒಡೆದಿರತಕ್ಕದ್ದು. ಅವರು ರಿಪೇರಿ ಮಾಡಿದ್ದಾರೆಂದು ಹೇಳಿದ್ದಾರೆ. ನಾನು ಸ್ವತಃ ನೋಡಿದ್ದೇನೆ, ರಿಪೇರಿ ಏನೂ ಮಾಡಿಲ್ಲ. ಮಾನ್ಯ ಬೈರೇಗೌಡರಿಗೆ ಚೆನ್ನಾಗಿ ಗೊತ್ತಿದೆ ಕೇಳಿ, ಅವರು ರಿಪೇರಿ ಮಾಡಬೇಕಾದರೆ ಕಾಲುವೆ ಸ್ಟ್ರೆಂಗ್ತನ್ ಮಾಡಬೇಕು. ಸ್ಟ್ರೆಂಗ್ತನ್ ಮಾಡುವ ಮುಂದೆ ಏನು ಮಾಡಿದ್ದಾರೆಂದರೆ ಕೆನಾಲ್‌ನ ಇನ್ನರ್ ವಾಲ್‌ಗೆ ಆ ಸ್ಟೋನ್ ಲಿಂಕ್ ಕೊಟ್ಟಿದ್ದಾರಲ್ಲ, ಅದಕ್ಕೆ ಸಿಮೆಂಟ್ ಲೈನಿಂಗ್ ಹೊಡೆದಿದ್ದಾರೆ. ಲೈನಿಂಗ್ ಹೊಡೆದು ಸಿಮೆಂಟನ್ನು ಜಲ್ಲಿ ಹಾಕಿ ಚೆಲ್ಲಿ ಬಿಟ್ಟಿದ್ದಾರೆ. ಅದು ರಿಪೇರಿ ಮಾಡಿರತಕ್ಕದ್ದು. They have not actually strenghthened it. Instead of strengthening the line ಇನ್ನರ್ ವಾಲ್‌ಗೆ ಸಿಮೆಂಟನ್ನು ಸುಣ್ಣ ಬಳಿದ ಹಾಗೆ ಬಳಿದು ಬಿಟ್ಟು ದುಡ್ಡು ಡ್ರಾ ಮಾಡಿದ್ದಾರೆ. ಆ ದುಡ್ಡಿನ ವಿವರವನ್ನೇ ನಾನು ಹೇಳಿದ್ದು. 18 ಕೋಟಿ ಒಂದು ಸಲ, 21 ಕೋಟಿ ಇನ್ನೊಂದು ಸಲ; 31ನೇ ತಾರೀಖು ಒಬ್ಬ ಚೀಫ್ ಇಂಜಿನಿಯರ್ ರಿಟೈರ್ ಆಗುತ್ತಾನೆಂದು ಹೇಳಿ 15 ಕೋಟಿಗೆ ಅವರು ವಿವರವಾದ ಬಿಲ್ ಮಾಡಿದ್ದಾರೆ. ಆ ಬಿಲ್ ವಿವರಗಳನ್ನು ಸಹ ನಾನು ಕೊಟ್ಟಿದ್ದೇನೆ. ಎರಡು ಕೋಟಿ ಒಂದು ಸಾರಿ, 18 ಕೋಟಿ ಒಂದು ಸಾರಿ.

ಉಪಾಧ್ಯಕ್ಷರು:- ತಾವು ಪ್ರಸ್ತಾಪ ಮಾಡುವಾಗ ವಿವರಗಳನ್ನೆಲ್ಲಾ ಹೇಳಿದ್ದೀರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಅವರು ಈಗ ಎಕ್ಸ್‌ಪರ್ಟ್ ಕಮಿಟಿ, ಕೆ.ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಮಾಡುತ್ತೇವೆಂದು ಹೇಳಿದರು. ಈಗಾಗಲೇ ಒಂದು ಕಮಿಟಿಯನ್ನು ಅವರು ಮಾಡಿದ್ದರು. ಆ ಕಮಿಟಿ ಸರ್ಕಾರಕ್ಕೆ ವರದಿ ಕೊಟ್ಟಿದೆ. ಆ ಸಮಿತಿ ವರದಿ ಏನು ಕೊಟ್ಟಿದೆ? ಸರ್ಕಾರ ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ? ಆ ಕಮಿಟಿ ಅಭಿಪ್ರಾಯ ನನಗೆ ಗೊತ್ತಿರುವ ಪ್ರಕಾರ ಸರ್ಕಾರಕ್ಕೆ ಏನು ಹೇಳಿದೆ ಅಂದರೆ "The very plan of that canal is at fault" ಡಿಸೈನ್ ಫಾಲ್ಟ್ ಇದೆ ಎಂದು ಅವರು ಅಭಿಪ್ರಾಯ ಕೊಟ್ಟಿದ್ದಾರೆ. ಅದು ನನ್ನ ಮಾಹಿತಿ. ಸರ್ಕಾರಕ್ಕೆ ಏನು ಮಾಹಿತಿ ಬಂದಿದೆ? ಸರ್ಕಾರ ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ, ಎಂದು ನನಗೆ ಗೊತ್ತಿಲ್ಲ. ಆ ಸಮಿತಿ ರಿಪೋರ್ಟ್ ಹಾಗೆಯೇ ಇಟ್ಟು ಇನ್ನೊಂದು ಕಮಿಟಿ ಮಾಡುವುದರಲ್ಲಿ ಏನಾದರೂ ಅರ್ಥ ಇದೆಯಾ? ಆ ಕಮಿಟಿ ರಿಪೋರ್ಟ್ ಏನಾಯಿತು ಎಂದು ಮೊದಲು ಹೇಳಲಿ. ಮತ್ತೆ ಆ ಕಮಿಟಿ ರಿಪೋರ್ಟ್ ಏನು ಇದೆ ಎಂದು ಮತ್ತೆ ಒಂದು ಕಮಿಟಿ ಮಾಡಲಿ. ನಾನು ಅದಕ್ಕೇ ಹೇಳುವುದು, ಆ ಸಮಿತಿ ಏನು ವರದಿ ಕೊಟ್ಟಿದೆ ಅದನ್ನು ಮೊದಲು ಸದನಕ್ಕೆ ಹೇಳಬೇಕು. ಅವರು ಏನು ಹೇಳಿದ್ದಾರೆಂದು ಹೇಳಬೇಕು. ಆ ಸಮಿತಿ ವರದಿಯಲ್ಲಿ ಏನಾದರೂ ಫಾಲ್ಟ್ ಇದ್ದರೆ, ಈಗ ಅವರು ಮತ್ತೊಂದು ಕಮಿಟಿ ಮಾಡಲಿ. ಕೆ.ಸಿ. ರೆಡ್ಡಿಯವರ ಕಮಿಟಿಯೋ ಅಥವಾ ಯಾರು ಎಕ್ಸ್‌ಪರ್ಟ್ ಇದ್ದಾರೆ ಅವರ ಅಧ್ಯಕ್ಷತೆಯಲ್ಲಿ ಕಮಿಟಿ ಮಾಡಲಿ. ನನ್ನ ಅಭಿಪ್ರಾಯ ಸದನ ಸಮಿತಿ ಮಾಡಬೇಕು; ಸದನ ಸಮಿತಿ ಮಾಡಿದರೆ, ಅದರ ಇಡೀ ವಿಚಾರ ಸದನಕ್ಕೆ ಗೊತ್ತಾಗುತ್ತದೆ. ಅಲ್ಲಿ 22 ಲಕ್ಷ ಹೆಕ್ಟೇರ್ ಸಾಗುವಳಿ

ಆಗುತ್ತಿದೆ. ಈಗ ಆ ನಾಲ್ಕು ಲಕ್ಷ ಹೆಕ್ಟೇರ್‌ಗೆ ಮೂರು ಸಾವಿರ ಕ್ಯೂಸೆಕ್ಸ್ ನೀರು ಕೊಟ್ಟು ಸಾಯುವ ಪರಿಸ್ಥಿತಿ ಬಂದಿದೆ. ಸದನ ಸಮಿತಿ ಮಾಡಲಿ ಅವರು ಬೇಕಾದರೆ ಎಕ್ಸ್‌ಪರ್ಟ್ ಕಮಿಟಿಯನ್ನು ಮಾಡಿಕೊಳ್ಳಲಿ. ಸದನದ ಸಮಿತಿ ಎರಡೇ ದಿವಸದಲ್ಲಿ ವರದಿ ಕೊಟ್ಟು ಬಿಡಲಿ.

ಶ್ರೀ ಕೆ.ಎನ್. ನಾಗೇಗೌಡ:- ಮಾನ್ಯ ಸದಸ್ಯರು ಹೇಳಿದರು, 1990ರಿಂದ ಇಲ್ಲಿಯವರೆಗೆ ಹಿಂದಿನ 18 ಕೋಟಿ ರೂಪಾಯಿ ವಿಚಾರ ಹಾಗೂ 21 ಕೋಟಿ ಎಸ್ಟಿಮೇಟ್ ವಿಚಾರ ಏನು ಹೇಳುತ್ತಿದ್ದಾರೆ ಇವೆಲ್ಲವನ್ನೂ ಸಹ ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಅವರು ಸಲಹೆ ಮಾಡಿದ ಹಾಗೆ ನಾನು ಆ ಕಮಿಟಿಗೆ ಹಾಕಿದ್ದೇನೆ. ನಾನು ಬೇಕಾದರೆ ಮತ್ತೊಂದು ಸಾರಿ ನೀವು ಇನ್ನು ಯಾರಿಂದಲಾದರೂ ಸೆಕ್ರೆಟರಿಯವರನ್ನು ಕರೆಯಿಸಿ ವರದಿ ಮಾಡಬೇಕು ಎಂದರೆ ಮಾಡುತ್ತೇನೆ. ಕೆ.ಸಿ. ರೆಡ್ಡಿಯವರನ್ನು ಕರೆಯಿಸಿ ವರದಿ ಮಾಡಿ ಎಂದರೂ ಮಾಡೋಣ. ತಾವು ಯಾರಿಗೆ ಹೇಳುತ್ತೀರಿ ಅವರನ್ನು ಕಳುಹಿಸಿ ವಿಚಾರಣೆ ಮಾಡಿಸುವುದರಲ್ಲಿ ಎರಡನೇ ಮಾತೇ ಇಲ್ಲ. ಆ ಎಲ್ಲ ಡೀಟೇಲ್ಸನ್ನು ನಾನೇ ನಾಳೆ ನಾಡಿದ್ದರಲ್ಲಿ ಏನೇನು ಆಕ್ಚುಯಾಲಿಟಿ ಇದೆ ಎಂದು ತಿಳಿದುಕೊಂಡು ಬಂದು ಸದನಕ್ಕೆ ತಿಳಿಸುವುದಕ್ಕೆ ತಯಾರಾಗಿದ್ದೇನೆ. ಆದರಲ್ಲಿ ಏನೂ ಬೇರೆ ವಿಚಾರ ಇಲ್ಲ. ಈಗ ಇರತಕ್ಕ 59.45ನಿಂದ ಕಿಲೋ ಮೀಟರ್ 59.06ರವರೆಗೆ "1989ನೇ ಇಸವಿಯಲ್ಲಿ ಆದ ಮಣ್ಣಿನ ವೈಫಲ್ಯತೆಯನ್ನು ಕಂಡು ಹಿಡಿಯಲು ಸರ್ಕಾರ ಆಕ್ಟೋಬರ್ 1994ರಲ್ಲಿ ಒಂದು ಸಮಿತಿಯನ್ನು ರಚಿಸಿತು" ಆ ಸಮಿತಿಯು ಒಂದು ವರದಿಯನ್ನು ಹೋದ ತಿಂಗಳು ಜುಲೈ 1996ರಂದು ನಮ್ಮ ಸರ್ಕಾರಕ್ಕೆ ಸಲ್ಲಿಸಿದೆ. "ಇದು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ." ಇದು ಜುಲೈ 1996ರಂದು ಹೋದ ತಿಂಗಳು ಕೊಟ್ಟಿರುವುದು. ಅವರು ಏನು ಸಜೆಸ್ಟ್ ಮಾಡಿದ್ದಾರೆಂದು ನಾನು ಇನ್ನೂ ಡೀಟೇಲ್ಸನ್ನು ನೋಡಿಲ್ಲ. ಅವರು ಏನು ಹೇಳಿದ್ದಾರೆ, 10 ಸಾವಿರ ಕ್ಯೂಸೆಕ್ಸ್‌ಗೆ ಇನ್ನರ್ ಸ್ಟ್ರೆಂಗ್ತನ್ ಮಾಡಿರತಕ್ಕ ಡಿಸೈನ್ ಸರಿ ಇಲ್ಲ ಎಂದು ಹೇಳಿದ್ದಾರೆ. ಈ ಸಮಿತಿಯವರು ಏನು ಮಾಡಿದ್ದಾರೆ? 1994ರ ಆಕ್ಟೋಬರ್‌ನಲ್ಲಿ ಎಂದು ಹೇಳಿದ್ದಾರೆ. ಆ ಸಮಿತಿಯ ವರದಿಯನ್ನು ಮತ್ತು ಇವರು ಈಗ ಹೇಳಿರತಕ್ಕ ವಿಚಾರ ಎಲ್ಲವನ್ನೂ ಟೆಕ್ನಿಕಲ್ ಕಮಿಟಿಗೆ ರೆಫರ್ ಮಾಡುತ್ತೇನೆ. ಮೇನ್ ಡಿಸೈನ್ ಸರಿ ಇಲ್ಲವೇ ಅಥವಾ ಕೆನಾಲ್ ಡಿಸೈನ್ ಸರಿ ಇಲ್ಲವೇ ಎಲ್ಲವನ್ನೂ ಅವರು ವಿಚಾರ ಮಾಡುತ್ತಾರೆ.

ಶ್ರೀ ಧರ್ಮಸಿಂಗ್:- ಆ ವರದಿ ಸದನಕ್ಕೆ ಕೊಟ್ಟು ಬಿಡಿ.

ಶ್ರೀ ಕೆ.ಎನ್. ನಾಗೇಗೌಡ:- ಜುಲೈ 1996ರಂದು ವರದಿ ಕೊಟ್ಟಿದ್ದಾರೆ. ಹೋದ ತಿಂಗಳು. ಆ ವರದಿಯನ್ನು ತೆಗೆದುಕೊಂಡು ಬಂದು ಸದನದಲ್ಲಿ ಇಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ವಿಷಯ ಬಹಳ ಸುಲಭ. 1994ರ ವರದಿಯಲ್ಲಿ ಏನು ಇದೆ ಎಂದು ಹೇಳಿ, ಅದು ಗೋಪ್ಯವಾಗಿಡತಕ್ಕ ವರದಿ ಏನಲ್ಲ. 1994ರ ವರದಿ ಏನಿದೆ ಅದನ್ನು ಗೋಪ್ಯವಾಗಿ ಇಡತಕ್ಕದ್ದಲ್ಲ ಮಾನ್ಯ ನಾಗೇಗೌಡರೇ.

ಶ್ರೀ ಕೆ.ಎನ್. ನಾಗೇಗೌಡ:- ನಾನು ಇವತ್ತೇ ಈ ಸದನ ಮುಗಿಯುವುದಕ್ಕೆ ಮುಂಚಿತವಾಗಿ ವರದಿ ಇಡುತ್ತೇನೆ. ಗೋಪ್ಯ ಏನೂ ಇಲ್ಲ. ಈಗಲೇ ವರದಿ ತರಿಸಿ ಇಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ನನ್ನದೊಂದು ಸಲಹೆ. ಈಗೇನು ಶ್ರೀರಾಮರೆಡ್ಡಿಯವರು ಸದನ ಸಮಿತಿ ಮಾಡಬೇಕೆಂದು ಹೇಳಿದರು. ಇವತ್ತು ನನಗೆ ಅನಿಸುತ್ತದೆ, ಎಲ್ಲಾ ವಿರೋಧ ಪಕ್ಷದ ಮುಖಂಡರುಗಳನ್ನು ಸಮಗ್ರವಾಗಿ ಕೃಷ್ಣಾ ಕರ್ಮಕಾಂಡವನ್ನು ದರ್ಶನ ಮಾಡುವುದಕ್ಕೆ ಕರೆದುಕೊಂಡು ಹೋಗಬಹುದು. ತಾವು ಇತ್ತೀಚೆಗೆ ಬಂದಿದ್ದೀರಿ. ಆ ಕರ್ಮ ಕಾಂಡಕ್ಕೆ ನಿಮ್ಮನ್ನು ಹೊಣೆ ಮಾಡುತ್ತೇನೆ ಎನ್ನತಕ್ಕ ಪ್ರಶ್ನೆಗೆ ಹೋಗುವುದಿಲ್ಲ. ತಾವು ತಕ್ಷಣ ಮುಂದಿನ ವಾರ ಎಲ್ಲಾ ವಿರೋಧ ಪಕ್ಷದ ಮುಖಂಡರುಗಳೂ ಅಲ್ಲಿಗೆ ಹೋಗತಕ್ಕ ವ್ಯವಸ್ಥೆ ಮಾಡಿ. ಇನ್ನು ಎರಡನೆಯದಾಗಿ ಕಾವೇರಿ ಬಗ್ಗೆ ತರಾತುರಿ ಮಾತುಕತೆ ಆಡಿದ್ದೀರಿ.

ಉಪಾಧ್ಯಕ್ಷರು:- ಅದು ಬೇರೆ ವಿಷಯ.

ಶ್ರೀ ವಾಟಾಳ್ ನಾಗರಾಜ್:- ಅದರ ಬಗ್ಗೆ ತಾವೇನು ಮಾತುಕತೆಗೆ ಹೊರಟಿದ್ದೀರಿ. ಹಿಂದೆ ಕೃಷ್ಣಾ ಬಗ್ಗೆನೂ, ಆಗಿನ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ ಎಲ್ಲಾ ಮುಖ್ಯಮಂತ್ರಿಗಳ ಸಭೆ ಮೈಸೂರಿನಲ್ಲಿ ನಡೆದಿತ್ತು. ಆದಾದ ನಂತರ ತಿರುಪತಿಯಲ್ಲಿ ನಡೆಯಿತು. ತಿರುಪತಿ, ಮೈಸೂರು, ಮಹಾಬಲೇಶ್ವರದಲ್ಲಿ ನಡೆಯಿತು. ಅದಾದ ನಂತರ ಈಗ ಮುಖ್ಯಮಂತ್ರಿಗಳ ಸಭೆ ಕರೆಯಬೇಕು ಎಂದು ಹೇಳುವಂತಹದು ಗೋಪ್ಯವಾಗಿಯೇ ಉಳಿದಿದೆ. ಕರೆಯಲೇ ಇಲ್ಲ, ಆದರ ಬಗ್ಗೆ ಚಿಂತನೆಯೇ ಆಗಲಿಲ್ಲ. ನಿಮ್ಮ ಸರ್ಕಾರದವರು ಕಾವೇರಿಯ ಬಗ್ಗೆ ತಮಿಳುನಾಡಿಗೆ ತರಾತುರಿಯಲ್ಲಿ ಓಡಿ ಹೋದರಲ್ಲ, ಈ ಕೃಷ್ಣಾ ಬಗ್ಗೆ ಬಡಪಾಯಿ ಕೃಷ್ಣಾ ಬಗ್ಗೆ ಒಂದು ರೀತಿ ಕಡೆಗಾಣಿಸತಕ್ಕ ವಸ್ತುವಾಗಿ ಮಾಡಿದ್ದೀರಿ. ಆದ್ದರಿಂದ ಇವತ್ತು ಭಾವನಾತ್ಮಕವಾಗಿ ಕೂಗುವಂತಹ ಪರಿಸ್ಥಿತಿ ನಮ್ಮದು. ಹಿಂದೆ ಶ್ರೀಶೈಲಂನಲ್ಲಿ ಸಭೆ ಕರೆಯಬೇಕು ಎಂದು, ಶ್ರೀಮಾನ್ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿ ಆಗಿದ್ದಾಗ ಚರ್ಚೆ ನಡೆದಿತ್ತು. ಇವೊತ್ತು ಆ ಸಭೆಯನ್ನು ಕರೆಯಲು ನೀವು ತಯಾರಿಲ್ಲ. ಮತ್ತು ಕೃಷ್ಣಾ ಯೋಜನೆ ಬಗ್ಗೆ ಯಾವ ವ್ಯವಸ್ಥೆ ಮಾಡಲಾಗಿದೆಯೆಂಬುದನ್ನೂ ಕೂಡ ತಿಳಿಸಿಲ್ಲ. ನಾರಾಯಣಪುರ ಎಡದಂಡೆ ನಾಲೆ ಕೃಷ್ಣಾ ಯೋಜನೆಗೆ ಸೇರುತ್ತದೆ ಅಲ್ಲವೇ? ಅಥವಾ ಕಾವೇರಿಗೆ ಸೇರುತ್ತದೆಯೇ?

ಉಪಾಧ್ಯಕ್ಷರು:- ತಾವು ಸ್ಪಷ್ಟೀಕರಣ ಮಾತ್ರ ಕೇಳಬೇಕು. ಭಾಷಣ ಮಾಡುತ್ತಾ ಹೋದರೆ ಹೇಗೆ? ಏನಾದರೂ ಕೇಳುವುದಿದ್ದರೆ ಸಂಕ್ಷಿಪ್ತವಾಗಿ ಹೇಳಿ.

ಶ್ರೀ ವಾಟಾಳ್ ನಾಗರಾಜ್:- ಈ ಕುರಿತು ಚರ್ಚಿಸಲು ಮುಖ್ಯಮಂತ್ರಿಗಳ ಸಭೆ ಕರೆಯುವ ಬಗ್ಗೆ ನಿಮ್ಮ ಸರ್ಕಾರದ ನಿಲುವು ಏನೆಂದು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಕೆ.ಎನ್. ನಾಗೇಗೌಡ:- ಮಾನ್ಯ ಉಪಾಧ್ಯಕ್ಷರೆ, ಈ ನಾಲೆಯ ಬಗ್ಗೆ 1994ರಲ್ಲಿ ರಚಿಸಲಾದ ಸಮಿತಿಯು ಕಳೆದ ತಿಂಗಳು ಮತ್ತೊಂದು ವರದಿ ಕೊಟ್ಟಿದೆ. ಮಾನ್ಯ ಹಿರಿಯ ಸದಸ್ಯರಾದ

ಶ್ರೀ ಧರ್ಮಸಿಂಗ್‌ರವರು ಹೇಳಿರುವ ಪ್ರಕಾರ ಆ ವರದಿಯನ್ನು ಈ ಕೂಡಲೇ ತರಿಸಿ, ಸದನದ ಮುಂದಿಡಲು ನಾನು ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತೇನೆ. ಮತ್ತು ವರದಿಯನ್ನು ಅಧ್ಯಯನ ಮಾಡಿ ಏನು ಕ್ರಮಗಳನ್ನು ತೆಗೆದುಕೊಳ್ಳುವುದಿದೆ, ಅದನ್ನು ತೆಗೆದುಕೊಳ್ಳುವುದಕ್ಕೂ ಸಹ ಪ್ರಯತ್ನ ಮಾಡುತ್ತೇನೆ. ಎರಡನೆಯದಾಗಿ, ನಾರಾಯಣಪುರ ಅಣೆಕಟ್ಟಿನ ವಿಚಾರವಾಗಿ ಪ್ರಸ್ತಾಪಿಸಿದ್ದಾರೆ. ಮಾನ್ಯ ಸದಸ್ಯರಾದ ಎಂ. ಮಲ್ಲಿಕಾರ್ಜುನ ಖರ್ಗೆಯವರು ಸಲಹೆ ಮಾಡಿರುವಂತೆ ಆ ಕುರಿತು ಎಲ್ಲವನ್ನೂ ತನಿಖೆ ಮಾಡುವುದಕ್ಕೆ ಸಮಿತಿಗೆ ವಹಿಸುತ್ತೇವೆ ಹಾಗೂ ಅದರ ಇನ್ನರ್ ಸ್ಟೈಂಗ್ತ ಅನ್ನು ಮಾಡಿಸಲೇಬೇಕಾಗುತ್ತದೆ. ಅಲ್ಲಿನ ನಾಲೆ ಪದೇ ಪದೇ ಒಡೆಯುತ್ತಿರುವುದರಿಂದ ಅಲ್ಲಿ ಏನೋ ಸಮಸ್ಯೆ ಇರಬೇಕೆಂದು ಪೂರ್ವಭಾವಿಯಾಗಿ ನನ್ನ ಮನಸ್ಸಿಗೂ ಅನ್ನಿಸುತ್ತಿರುವುದರಿಂದ ಅದರ ಇನ್ನರ್ ಸ್ಟೈಂಗ್ತ ಅನ್ನು ಮಾಡತಕ್ಕಂಥಾದ್ದು ಆನ್ ಟರ್ಮ್ಸ್ ಆಫ್ ರೆಫರೆನ್ಸ್ ಮಾಡಬೇಕು. ಮೂರನೆಯದಾಗಿ, ಕೃಷ್ಣಾ ಯೋಜನೆ ಬಗ್ಗೆ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಹೇಳಿದಂತೆ ಸದನ ಸಮಿತಿಯ ಅವಶ್ಯಕತೆಯಿಲ್ಲ. ಆದರೆ, ಒಂದು ಸಲಹೆಯನ್ನು ನಾನು ಒಪ್ಪುತ್ತೇನೆ. ತಾವುಗಳೆಲ್ಲರೂ ಕೃಷ್ಣಾ ಮೇಲ್ದಂಡೆ ಯೋಜನೆಯ ಕಾಮಗಾರಿಗಳನ್ನು ನೋಡಬೇಕೆಂದು ಹೇಳಿರುವುದರಿಂದ, ನೀರಾವರಿ ಯೋಜನೆಗಳನ್ನು ವೀಕ್ಷಿಸುವುದು ಬಹಳ ಉತ್ತಮವಾಗಿರುವುದರಿಂದ ನಾನು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ, ವಿರೋಧ ಪಕ್ಷದ ನಾಯಕರುಗಳು, ಶಾಸಕರು ಮತ್ತು ಆಡಳಿತ ಪಕ್ಷದ ಸದಸ್ಯರುಗಳನ್ನು ನಾನು ಖುದ್ದಾಗಿ ಸಂಪರ್ಕಿಸಿ ಯಾವ್ಯಾವ ಪ್ರದೇಶಗಳಿಗೆ ಕರೆದುಕೊಂಡು ಹೋಗಬೇಕೆಂಬ ಬಗ್ಗೆ ಚರ್ಚಿಸಿ ತಾವೆಲ್ಲರೂ ಅಲ್ಲಿಗೆ ಹೋಗಿ ನೀರಾವರಿ ಯೋಜನೆಗಳನ್ನು ವೀಕ್ಷಿಸಲು ವ್ಯವಸ್ಥೆ ಮಾಡುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ. ಮತ್ತು ತಾವುಗಳು ಯೋಜನಾ ಸ್ಥಳಕ್ಕೆ ಭೇಟಿ ಕೊಟ್ಟು ಪರಿಶೀಲಿಸಿ ಏನು ಸಲಹೆಗಳನ್ನು ಕೊಡುತ್ತೀರೋ, ಅದನ್ನು ತೆಗೆದುಕೊಳ್ಳುವುದಕ್ಕೆ ಎಲ್ಲಾ ಪ್ರಯತ್ನ ಮಾಡುತ್ತೇನೆ. ನಾಲ್ಕನೆಯದಾಗಿ, ಮುಖ್ಯಮಂತ್ರಿಗಳ ವಿಚಾರವಾಗಿ ಮಾತನಾಡುತ್ತಾ ಯು.ಕೆ.ಪಿ. ಕೃಷ್ಣಾಗೆ ಸೇರಲಿಲ್ಲವೆಂದು ಹೇಳಿದರು. ನಾವು ಐದನೇ ತಾರೀಖಿನಂದು ತರಾತುರಿಯಿಂದ ಓಡಿಹೋದದ್ದಲ್ಲ. ಮತ್ತು ಐದನೇ ತಾರೀಖಿನಂದು ಮದ್ರಾಸ್‌ನಲ್ಲಿ ಏನು ಮಾತುಕತೆಯಾಯಿತು ಎಂಬುದರ ಬಗ್ಗೆ ನಾನು ಪ್ರಸ್ತಾಪಿಸುವುದಕ್ಕೆ ಹೋಗುವುದಿಲ್ಲ. ಆರನೇ ತಾರೀಖಿನ ದಿವಸ ನಾವು ದೆಹಲಿಯಲ್ಲಿ ಜಲ ಸಂಪನ್ಮೂಲ ಸಚಿವರು ಮತ್ತು ಪ್ರಧಾನಮಂತ್ರಿಗಳ ಹತ್ತಿರ ಕೃಷ್ಣಾ ಯೋಜನೆ ವಿಚಾರದಲ್ಲಿ ಅದರಲ್ಲೂ ವಿಶೇಷವಾಗಿ ಆಲಮಟ್ಟಿ ಅಣೆಕಟ್ಟು ವಿಚಾರದಲ್ಲಿ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆದಿದ್ದರು.

ಶ್ರೀ ಎಂ. ವೀರಪ್ಪ ಮೊಯಿಲಿ:- ಇದು ಈಗ ವಿಷಯಾಂತರವಾಗುತ್ತಿದೆ. ಏಕೆಂದರೆ, ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಮುಖ್ಯವಾಗಿ ತೆಲುಗು ಗಂಗಾ ಸಂಬಂಧವಾಗಿ ಇರುವ ಸ್ಕೀಂ 'ಬಿ' ಬಚಾವತ್ ತೀರ್ಪಿನಲ್ಲಿದೆ. ಇದರ ಬಗ್ಗೆ ಒಂದು ಇತ್ಯರ್ಥವಾಗಬೇಕು. ಅದು ಇದಕ್ಕೂ ಸಂಬಂಧ ಪಡುತ್ತದೆ, ಆಲಮಟ್ಟಿ ಅಣೆಕಟ್ಟಿಗೂ ಸಂಬಂಧಪಡುತ್ತದೆ. ಏಕೆಂದರೆ ಬಚಾವತ್ ತೀರ್ಪಿನಲ್ಲಿ ತಿಳಿಸಿರುವ 'ಬಿ' ಸ್ಕೀಂ ಅನ್ನು ಜಾರಿಗೊಳಿಸಿದರೆ ತೆಲುಗು ಗಂಗಾ ಮತ್ತು ಆಲಮಟ್ಟಿ ಅಣೆಕಟ್ಟಿನ ಸಮಸ್ಯೆ-

ಗಳೆರಡೂ ಪರಿಹಾರವಾಗುತ್ತದೆ. ಇದರ ಬಗ್ಗೆ ಯಾವಾಗಲೋ ನಿರ್ಣಯವಾಗಿದೆ. ಈ ಕುರಿತು ಆಂಧ್ರ ಪ್ರದೇಶ, ಮಹಾರಾಷ್ಟ್ರ ಮತ್ತು ಕರ್ನಾಟಕದ ಮುಖ್ಯಮಂತ್ರಿಗಳು ಪರಸ್ಪರ ಸಂಧಾನದ ಮೂಲಕ ಸಮಸ್ಯೆಯನ್ನು ಇತ್ಯರ್ಥಗೊಳಿಸಿಕೊಳ್ಳಬೇಕೆಂದು ತೀರ್ಮಾನವಾಗಿದೆ. ಆ ರೀತಿ ಮೊದಲೇ ಆಗಿರುವ ತೀರ್ಮಾನವನ್ನು ತಾವೇಕೆ ಪುನಃ ಡೈಲ್ಯೂಟ್ ಮಾಡುತ್ತಿದ್ದೀರಿ? ದೆಹಲಿಗೆ ಏಕೆ ಹೋಗುತ್ತಿದ್ದೀರಿ? ಹಾಗಾದರೆ, ನಿಮ್ಮಲ್ಲಿ ಯಾವುದೇ ಸಾಮರಸ್ಯವಿಲ್ಲವೇ? ಆಂಧ್ರಪ್ರದೇಶ, ಕರ್ನಾಟಕ ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿಗಳಲ್ಲಿ ಪರಸ್ಪರ ಸಾಮರಸ್ಯವಿಲ್ಲದಿದ್ದರೆ, ಒಂದು ವೇಳೆ ಮಾತುಕತೆಯ ಸಂಧಾನ ಮುರಿದು ಬಿದ್ದರೆ, ಆಗ ನಿಮಗೆ ಕೇಂದ್ರದ ಮಧ್ಯಸ್ಥಿಕೆ ಬೇಕಾಗುತ್ತದೆ. ಆದುದರಿಂದ, ದಯಮಾಡಿ ತಾವು ಆ ಸಭೆ ನಡೆಸುವುದಕ್ಕೆ ಹೋಗಬೇಡಿ. ಮೂರೂ ರಾಜ್ಯಗಳ ಮುಖ್ಯಮಂತ್ರಿಗಳು ತೀರ್ಮಾನ ಮಾಡತಕ್ಕಂಥ ಪ್ರಯತ್ನ ಏನು ಸಾಗಿದೆ, ಆ ಕುರಿತು ಮಾಹಿತಿಗಳನ್ನು ಸಂಗ್ರಹಿಸಬೇಕು. ಈಗಾಗಲೇ ಅದರ ಪ್ರಗತಿಯಾಗಿದೆ. ಆ ದಾರಿ ಬಿಟ್ಟು ಕೇಂದ್ರದ ಮಧ್ಯಸ್ಥಿಕೆಗೆ ಹೋಗುವುದು ಸರಿಯಲ್ಲ. ದಯಮಾಡಿ ಇದರ ಬಗ್ಗೆ ತಾವು ನೀರಾವರಿ ತಜ್ಞರ ಜೊತೆ ವಿಚಾರ ಮಾಡಿ. ಏಕೆಂದರೆ, ಅಭಿವೃದ್ಧಿಯನ್ನು ಬದಲಾವಣೆ ಮಾಡಲು ಹೋಗಬೇಡಿ, ಇದರಿಂದ ಮತ್ತೆ ನಮಗೇ ಹಾನಿಯಾಗುತ್ತದೆ, ಡೈವರ್ಶನ್ ಆಗುತ್ತದೆ. ಈ ದೇಶದ ಸಾರ್ವಜನಿಕರಲ್ಲಿ ಆಲಮಟ್ಟಿ ಬಗ್ಗೆ ಸುದ್ದಿ ಹಬ್ಬಿದೆ. ಇಲ್ಲಿ ಬರೀ ಆಲಮಟ್ಟಿ ಪ್ರಶ್ನೆ ಮಾತ್ರವಲ್ಲ, ತೆಲುಗು ಗಂಗಾ ಪ್ರಶ್ನೆಯೂ ಅಡಗಿದೆ ಜೊತೆಗೆ ಕೃಷ್ಣಾ ಮೇಲ್ದಂಡೆ ಯೋಜನೆ ಪ್ರಶ್ನೆಯೂ ಇದೆ. ಅಲ್ಲದೆ, ಬಚಾವತ್ ತೀರ್ಪಿನಲ್ಲಿರುವ 'ಬಿ' ಸ್ಕೀಂ ಅನ್ನು ಅನುಷ್ಠಾನಗೊಳಿಸುವ ಅನೇಕ ಪ್ರಶ್ನೆಗಳು ಇದರಲ್ಲಿದೆ. ಏಕೆಂದರೆ, you are unnecessarily putting yourselves into the Dock. ಇವೊತ್ತು ನಮ್ಮನ್ನು ಅಪರಾಧಿ ಸ್ಥಾನದಲ್ಲಿಡುವುದಕ್ಕೆ ಆಲಮಟ್ಟಿ ಪ್ರಶ್ನೆಯನ್ನು ಅವರು ಎತ್ತಿದ್ದಾರೆ. ನಿಜವಾಗಿಯೂ ಅಪರಾಧಿ ಸ್ಥಾನದಲ್ಲಿರುವವರು ಆಂಧ್ರ ಪ್ರದೇಶದವರೇ ಹೊರತು ಕರ್ನಾಟಕದವರಲ್ಲ. ಆದುದರಿಂದ, ಈ ವಿಚಾರವಾಗಿ ತಾವು ಬೇಕಾದರೆ ನಮ್ಮ ವಿರೋಧ ಪಕ್ಷದ ನಾಯಕರುಗಳನ್ನು ಕರೆದು ಮಾತನಾಡಿ. ಅದು ಬಿಟ್ಟು ದೆಹಲಿಯಿಂದ ಒತ್ತಡ ಬರುತ್ತದೆಂದು ತಾವೇನೋ ಅವಸರ ಪಟ್ಟುಕೊಂಡು ಕರ್ನಾಟಕ ರಾಜ್ಯದ ಹಿತಾಸಕ್ತಿಗೆ ಆಘಾತವಾಗತಕ್ಕಂಥ ಕೆಲಸವನ್ನು ತಾವು ದಯಮಾಡಿ ಮಾಡಬೇಡಿ.

ಶ್ರೀ ಕೆ.ಎನ್. ನಾಗೇಗೌಡ:- ತಾವು ಹಿಂದೆ ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದವರು. ನಾನು ಹೇಳಿದ್ದು ಏನೆಂದರೆ, ಹೈದರಾಬಾದ್ ನ್ಯಾಯಾಲಯದಲ್ಲಿ ಕೇಂದ್ರೀಯ ಜಲ ಆಯೋಗದವರು ಆಲಮಟ್ಟಿ ಅಣೆಕಟ್ಟು ವಿಚಾರವಾಗಿ ಪ್ರಸ್ತಾಪಿಸುವುದಕ್ಕೆ ನಾಲ್ಕೂ ರಾಜ್ಯಗಳ ನೀರಾವರಿ ಕಾರ್ಯದರ್ಶಿಗಳ ಸಭೆಯನ್ನು ಕರೆದಿದ್ದರು. ಐದನೇ ತಾರೀಖಿನ ದಿವಸ ಕೇಂದ್ರೀಯ ಜಲ ಆಯೋಗದ ಮುಂದೆ ಅವರು ಹೇಳಿದ್ದನ್ನೇ 'ಬಿ' ಸ್ಕೀಂ ಬಗ್ಗೆ ಚರ್ಚಿಸಲಾಗಿದೆ. ನಂತರ, ಆಲಮಟ್ಟಿ ಅಣೆಕಟ್ಟಿನ ಬಗ್ಗೆ ಅಧಿಕಾರಿಗಳ ಮಟ್ಟದಲ್ಲಿ ಚರ್ಚಿಸಿ ಆರನೇ ತಾರೀಖಿನ ದಿವಸ ನಾಲ್ಕೂ ರಾಜ್ಯಗಳ ಮುಖ್ಯಮಂತ್ರಿಗಳು ತಮ್ಮ ಒಪ್ಪಿಗೆ ಕೊಟ್ಟರೆ 'ಬಿ' ಸ್ಕೀಂ ಬಗ್ಗೆ ಚರ್ಚಿಸುವುದಕ್ಕೋಸ್ಕರ ನಾವು ಸಭೆ ಕರೆದಿದ್ದು. ಇದರಲ್ಲಿ ಡೈವರ್ಶನ್ ಎನ್ನುವುದು ಯಾವುದನ್ನೂ ನಾವು ಮಾಡುತ್ತಿಲ್ಲ. ಆಲಮಟ್ಟಿ ವಿಚಾರವಾಗಿ ತಾವು

ಸರಿಯಾಗಿಯೇ ಹೇಳಿದ್ದೀರಿ. ಆಲಮಟ್ಟಿ ತೆಲುಗು ಗಂಗಾ, ಇವೆರಡೂ ಯೋಜನೆಗಳಿಗೆ ಸ್ಕೀಂ 'ಬಿ' ಉತ್ತರವಾಗುತ್ತದೆನ್ನುವ ಅಂಶವನ್ನು ಅವರು ಏನು ಹೇಳಿದ್ದಾರೆ, ಐದನೇ ತಾರೀಖಿನ ದಿವಸ ಸಭೆ ಕರೆದದ್ದು ಕೇಂದ್ರೀಯ ಜಲ ಆಯೋಗದಲ್ಲಿ ಈ ವಿಚಾರವನ್ನು ಚರ್ಚಿಸುವುದಕ್ಕೆ ಮತ್ತು ಆರನೇ ತಾರೀಖಿನ ದಿವಸ ಮುಖ್ಯಮಂತ್ರಿಗಳು ಭೇಟಿಯಾಗುವ ಕಾರ್ಯಕ್ರಮವಿತ್ತು. ಐದನೇ ತಾರೀಖಿನ ದಿವಸ ಸಭೆ ನಡೆದಿದೆ, ಮತ್ತು ಅಂದಿನ ಸಭೆಯಲ್ಲಿ ಅವರು ಎರಡು ಪದಗಳನ್ನು ಏನು ಹೇಳಿದ್ದಾರೆ. . .

ಶ್ರೀ ಎಂ. ವೀರಪ್ಪ ಮೊಯಿಲಿ:- ತಾವು ಈಗ ಈ ಸಭೆ ಬಗ್ಗೆ ಏನು ಪ್ರಸ್ತಾಪಿಸುತ್ತಿದ್ದೀರಿ, ಈ ಸಭೆಗೆ ತಾವು ಹೋಗಬಾರದು. ಇಲ್ಲದಿದ್ದರೆ, ತಾವು ಒಂದು ವಿಚಾರವನ್ನು ಒಪ್ಪಿಕೊಳ್ಳಬೇಕು. ಏನೆಂದರೆ, 'ಮೂರು ರಾಜ್ಯಗಳ ಮುಂಖ್ಯಮಂತ್ರಿಗಳ ಸಭೆಯಲ್ಲಿ ಚರ್ಚೆ ವಿಫಲವಾಯಿತು, ಆದುದ–ರಿಂದ, ಸದರಿ ವಿಚಾರದಲ್ಲಿ ಕೇಂದ್ರದ ಹಸ್ತಕ್ಷೇಪದ ಬಗ್ಗೆ ನಾವು ಅಪೇಕ್ಷಿಸುತ್ತೇನೆ' ಎಂದು ಹೇಳಲು ತಾವು ಹೋಗಬಹುದು. ಆದರೆ, ಮೂರು ರಾಜ್ಯಗಳ ಮುಖ್ಯಮಂತ್ರಿಗಳ ಸಭೆಗೆ ನೀವು ಒತ್ತಾಯಿಸ–ಬೇಕಾಗುತ್ತದೆ. 'ನಮ್ಮೊಳಗೆ ನಾವು ಪರಿಹಾರ ಕಂಡುಕೊಳ್ಳತಕ್ಕಂಥ ಪ್ರಯತ್ನವನ್ನು ಖಂಡಿತಾ ಮಾಡುತ್ತಿದ್ದರೆ, ನಮಗೆ ಈ ವಿಚಾರದಲ್ಲಿ ಕೇಂದ್ರದ ಹಸ್ತಕ್ಷೇಪ ಬೇಕಾಗಿಲ್ಲ' ಎಂಬುದನ್ನು ಕರ್ನಾಟಕ ರಾಜ್ಯದ ಪರವಾಗಿ ತಾವು ಘಂಟಾಘೋಷವಾಗಿ ಹೇಳಬೇಕಾಗುತ್ತದೆ. ಒಂದು ವೇಳೆ ಇದಕ್ಕೂ ಅವರು ಒಪ್ಪದಿದ್ದರೆ ಮುಂದಿನ ಹೆಜ್ಜೆ ಇಡುವ ಬಗ್ಗೆ ನೋಡಿ. ಬರೀ ಆಲಮಟ್ಟಿ ವಿಚಾರದಲ್ಲೇ ಕೈಕೊಳ ಹಾಕಿ–ಕೊಂಡು, ಆ ಕುರಿತು ಚರ್ಚೆಗೆ ಹೋಗುವುದು ಈ ಕುರಿತು ಈಗಾಗಲೇ ಎದ್ದಿರುವ ವಿವಾದಕ್ಕೆ ಹೆಚ್ಚಿನ ಆಘಾತವುಂಟಾಗುತ್ತದೆಂಬುದನ್ನು ನೆನಪಿಟ್ಟುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾವೂ ಸಹ ಅದನ್ನೇ ಒತ್ತಾಯ ಮಾಡುತ್ತೇವೆ, ಮಾತು–ಕತೆಗೆ ಹೋಗುವ ಅಗತ್ಯವಿಲ್ಲ.

ಶ್ರೀ ವಾಟಾಳ್ ನಾಗರಾಜ್:- ದೆಹಲಿಯಲ್ಲಿ ಮಾತುಕತೆ ಮಾಡುವುದೇನಿದೆ?

ಶ್ರೀ ಕೆ.ಎನ್. ನಾಗೇಗೌಡ:- ನಾವು ಹೇಳುತ್ತಿರುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಏನೆಂದರೆ, ಹೈದರಾಬಾದಿನ ನ್ಯಾಯಾಲಯದಲ್ಲಿ ಈ ಕುರಿತು ವಿಚಾರಣೆ ನಡೆದಂಥ ಸಂದರ್ಭದಲ್ಲಿ ನ್ಯಾಯಾಲಯದವರು ಕೇಂದ್ರೀಯ ಜಲಆಯೋಗಕ್ಕೆ ನಿರ್ದೇಶನ ಕೊಟ್ಟಿದ್ದಾರೆ. ಎರಡು ವಾರ–ದೊಳಗೆ ಇದರ ಬಗ್ಗೆ ನೀವಿಬ್ಬರೂ ಚರ್ಚಿಸಿ ಎಂದು ಹೇಳಿದ್ದಾರಲ್ಲದೆ ನಾಲ್ಕೂ ರಾಜ್ಯಗಳ ಕಾರ್ಯ–ದರ್ಶಿಗಳು ಪರಸ್ಪರ ಚರ್ಚಿಸಿದ್ದಾರೆಂದು ಹೇಳಿದ್ದೇನೆ. ಆದರೆ, ಮಾನ್ಯ ಸದಸ್ಯರು ಮಾತನಾಡುತ್ತಾ ಮೂರೂ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯಲ್ಲಿನ ಚರ್ಚೆ ವಿಫಲವಾದ ನಂತರ ಕೇಂದ್ರದ ಮಧ್ಯ–ಸ್ಥಿಕೆ ಬೇಕಾಗುತ್ತದೆ ಎಂದು ಏನು ಹೇಳಿದರು, ಆ ರೀತಿ ಹೇಳಿಲ್ಲ. ಬದಲಾಗಿ ಮೂರೂ ರಾಜ್ಯಗಳವರು ಪರಸ್ಪರ ಕುಳಿತು ಮಾತನಾಡುತ್ತೇವೆಂದು ಹೇಳಿರುವುದನ್ನು ಹೇಳಿದ್ದೇನೆ. ಈಗಾಗಲೇ ಅಧಿಕಾರಿಗಳ ಮಟ್ಟದಲ್ಲಿ ಮಾತುಕತೆ ನಡೆದಿದೆ. ಅಧಿಕಾರಿಗಳ ಮಟ್ಟದ ಸಭೆಯಲ್ಲಿ ಸ್ಕೀಂ 'ಬಿ' ಬಗ್ಗೆ ಚರ್ಚೆ ಮಾಡಿದ್ದಾರೆ. ಇನ್ನು ಆಲಮಟ್ಟಿ ಅಣೆಕಟ್ಟಿನ ಬಗ್ಗೆಯೂ ಚರ್ಚಿಸಿದ್ದಾರೆ. ಇದರ ಬಗ್ಗೆ ಹೇಳುವುದಾದರೆ

ಐದನೇ ತಾರೀಖಿನ ದಿವಸ ಸಭೆ ನಡೆದಿದೆ ಮತ್ತು ಆರನೇ ತಾರೀಖಿನ ದಿವಸ ನೀರಾವರಿ ಸಚಿವರುಗಳ ಸಭೆ ಕರೆದಿದ್ದರು. ಅವರು ಸಭೆ ಕರೆದಿದ್ದಾಗಲೂ ಕೂಡ ಮೂರೂ ರಾಜ್ಯಗಳು ಈ ಕುರಿತು ಮಾತನಾಡಿ ಎಂದು ಹೇಳಿದ್ದಾರೆ. ಈ ಕುರಿತು ನಾವು ಆಲೋಚನೆ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ:- ಯಾರು ಕರೆದಿದ್ದಾರೆ?

ಶ್ರೀ ಕೆ.ಎನ್. ನಾಗೇಗೌಡ:- ಕೇಂದ್ರ ಸರ್ಕಾರದ ನೀರಾವರಿ ಸಚಿವರು ಕರೆದಿದ್ದಾರೆ.

ಉಪಾಧ್ಯಕ್ಷರು:- ತಾವು ಈಗ ವಿಷಯಾಂತರ ಏಕೆ ಮಾಡುತ್ತೀರಿ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- . . . ಸುಮಾರು 54 ಕೋಟಿ ರೂಪಾಯಿಗಳಷ್ಟು ಹಣ ಇವ್ವೊತ್ತು ದುರುಪಯೋಗವಾಗಿರುವುದರಿಂದ ಇದರ ಬಗ್ಗೆ ಚರ್ಚಿಸುವುದಕ್ಕೆ . . . ಅವರು ಒಂದು ವಿಷಯ ಹೇಳಿದ್ದಾರೆ. ಏನೆಂದರೆ, ಕೆ.ಸಿ. ರೆಡ್ಡಿಯವರ ನೇತೃತ್ವದಲ್ಲಿ ಒಂದು ಸಮಿತಿ ರಚಿಸುತ್ತೇವೆಂದು. ಕೃಷ್ಣಾ ಮೇಲ್ದಂಡೆ ಯೋಜನೆಯ ಶಹಾಪುರ ನಾಲಾ ವಿತರಣಾ ಕಾಲುವೆಯ ಡಿಸ್ಟ್ರಿಬ್ಯೂಟರಿ ಸಿಸ್ಟಂನಲ್ಲಿ ಮೂರರಿಂದ ಹತ್ತರವರೆವಿಗೂ ಸುಮಾರು 15 ಕೋಟಿ ರೂಪಾಯಿಗಳಷ್ಟು ಹಣದ ಬಿಲ್ ತಯಾರಿಸಿ. . . .

ಉಪಾಧ್ಯಕ್ಷರು:- ಇದರ ಬಗ್ಗೆ ತಾವು ಆಗಲೇ ಹೇಳಿದಿರಲ್ಲಾ, ಪದೇ ಪದೇ ಅದನ್ನೇ ಹೇಳುವುದೇನಿದೆ? ಈಗ ಮಲ್ಲಿಕಾರ್ಜುನ ಖರ್ಗೆಯವರು ಆಲಮಟ್ಟಿ ವಿಚಾರವಾಗಿ ತಾವು ಏನು ಸೂಚನೆ ಕಳುಹಿಸಿದ್ದೀರಿ, ಇದರ ಬಗ್ಗೆ, ತಾವು ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈಗಾಗಲೇ ನಾನು ಏನು ಸಲಹೆ ಕೊಟ್ಟಿದ್ದೆ, ಅದನ್ನು ಅವರು ಒಪ್ಪಿಕೊಂಡಿದ್ದಾರೆ. ಆದರೆ, ಹಿಂದಿನ ವರದಿ ಏನಿತ್ತು 54ನೇ ಕಿಲೋಮೀಟರ್ ನಿಂದ 76ನೇ ಕಿಲೋಮೀಟರ್‌ವರೆಗೆ ಆಗಿರುವ ಬ್ರೀಚ್ ಏನಾಗಿದೆ, ಅದರ ಬಗ್ಗೆ ವರದಿ ತರಿಸಿಕೊಳ್ಳಬೇಕೆಂದು ನಾನು ಸಲಹೆ ಮಾಡಿದ್ದೆ. ನಾನು ಈಗ ಸಲಹೆ ಮಾಡಿದ್ದು ಏನೆಂದರೆ, ಸೊನ್ನೆ ಕಿಲೋಮೀಟರ್‌ನಿಂದ 78ನೇ ಕಿಲೋ ಮೀಟರ್‌ವರೆಗೆ ಸಂಪೂರ್ಣವಾಗಿ ಬ್ರೀಚ್ ಆಗಿರುವಂತಾದ್ದು, ಮತ್ತು ಉಳಿದ ಆಪರೇಶನ್ ಮತ್ತು ಮೇಂಟನೆನ್ಸ್‌ಗಾಗಿ ಕೋಟ್ಯಾಂತರ ರೂಪಾಯಿಗಳು ದುರುಪಯೋಗವಾಗಿದ್ದು ಈ ಎಲ್ಲಾ ವಿಚಾರಗಳನ್ನು ಕೂಡ ಆ ವರದಿಯಲ್ಲಿ ತಿಳಿಸಬೇಕೆಂಬ ಬಗ್ಗೆ ಅವರು ಒಪ್ಪಿಕೊಂಡಿದ್ದಾರೆ, ಸಂತೋಷ. ಆದರೆ, ಒಂದು ವಿಷಯಕ್ಕೆ ಸಂಬಂಧಿಸಿದಂತೆ, ಅವರಿಂದ ಸೃಷ್ಟೀಕರಣ ಬರಲಿಲ್ಲ. ಈಗ ಬೆಳೆದು ನಿಂತಿರುವ ಬೆಳೆಗೆ ತಾವು ತಕ್ಷಣ ನೀರು ಒದಗಿಸಬೇಕು. ನೀರು ಕೊಡುವುದಕ್ಕೆ ಯುದ್ಧದೋಪಾದಿಯಲ್ಲಿ ಕಾಲುವೆಯನ್ನು ದುರಸ್ತಿಗೊಳಿಸಿ ಯಾವಾಗ ಕೊಡುತ್ತೀರಿ ಎಂಬುದನ್ನು ಹೇಳಬೇಕು. ಅಲ್ಲಿನ ರೈತರು ಇವ್ವೊತ್ತಿನ ದಿವಸ ಗೊಳಾಡುತ್ತಿದ್ದಾರೆ. ಏಕೆಂದರೆ ಅವರು ಹತ್ತಿ, ಸೂರ್ಯಕಾಂತಿ, ಶೇಂಗಾ ಬೆಳೆಗಳನ್ನು ಬೆಳೆದಿದ್ದು ಈ ಬೆಳೆಗಳನ್ನು ರಕ್ಷಿಸಲು ತಾವು ಕೂಡಲೇ ನೀರು ಒದಗಿಸುವುದಕ್ಕೆ ಕಾರ್ಯಕ್ರಮವನ್ನು ಯುದ್ಧದೋಪಾದಿಯಲ್ಲಿ ಕೈಗೊಳ್ಳಬೇಕಾಗುತ್ತದೆ.

1.20 ಪಿಎಂ

ರಾತ್ರಿ ಹಗಲು ಆ ಕೆಲಸವನ್ನು ಮಾಡಿ ಅದನ್ನು ರೆಸ್ಟೋರ್ ಮಾಡದಿದ್ದರೆ ರೈತರಿಗೆ ಉಪಯೋಗವಾಗುವುದಿಲ್ಲ. ದಯಮಾಡಿ ಇದರ ಬಗ್ಗೆ ಅವರು ಹೇಳಬೇಕು ಎಂದು ವಿನಂತಿಸುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರು ಶಹಪುರ ವಿಭಾಗದ 3 ರಿಂದ 10 ಕಿಲೋಮೀಟರ್‌ವರೆಗೆ ಬರತಕ್ಕ ಕೆನಾಲ್ ಬಗ್ಗೆ ಹೇಳಿದ್ದಾರೆ. ಅವರು ಇದರ ಜೊತೆಗೆ ಇನ್ನು ಬೇರೆ ಯಾವುದಾದರೂ ಇದ್ದರೆ ಈ ಸದನದಲ್ಲಿ ಹೇಳಲಿ, ಅಥವಾ ವಿವರವನ್ನು ಬರೆದು ಕಳಿಸಲಿ, ಅವರು ಯಾವ ವಿಚಾರಣೆಯನ್ನು ಕೇಳುತ್ತಾರೆ ಅದನ್ನು ಮಾಡಿಸಲು ತಯಾರಾಗಿದ್ದೇನೆ. ಆ ಸಮಿತಿಗೇ ಅದನ್ನು ರೆಫರ್ ಮಾಡುತ್ತೇನೆ. ಎರಡನೆಯದಾಗಿ ಸೊನ್ನೆಯಿಂದ ಎಪ್ಪತ್ತೆಂಟು ಕಿಲೋ–ಮೀಟರ್‌ವರೆಗೆ ಪರಿಶೀಲನೆ ಮಾಡಿಸಿ ಎಂದು ಹೇಳಿದ್ದಾರೆ ನಾನು ಅದನ್ನು ಖಂಡಿತವಾಗಿ ಮಾಡಿಸುತ್ತೇನೆ. ಏಕೆಂದರೆ ಮೂರು ಸಾವಿರ ಕ್ಯುಸೆಕ್ಸ್ ನೀರನ್ನು ಬಿಟ್ಟಿರುವಾಗಲೇ ಈ ಗತಿಯಾದರೆ ಹತ್ತು ಸಾವಿರ ಕ್ಯುಸೆಕ್ಸ್ ನೀರನ್ನು ಬಿಟ್ಟರೆ ಏನು ಪರಿಣಾಮವಾಗುತ್ತದೆ? I don't think it will be able to receive 10,000 cusecs of water. ಆ ಕೆನಾಲ್‌ನ ಒಳಭಾಗವನ್ನು ಸ್ಟೆಂಗ್ತನ್ ಮಾಡುವುದಕ್ಕೆ ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ. ಕೆನಾಲ್‌ನ ರಿಪೇರಿ, ಸಿಲ್ಟ್‌ನ್ನು ತೆಗೆಯುವುದು ಈ ಕೆಲಸದಲ್ಲಿ ಸೇರಿರುವುದಿಲ್ಲ. ನಾನು ಇದರ ಬಗ್ಗೆ ತಾಂತ್ರಿಕ ವರದಿಯನ್ನು ತರಿಸಿಕೊಂಡು ಸೊನ್ನೆಯಿಂದ ಎಪ್ಪತ್ತೆಂಟನೆ ಕಿಲೋಮೀಟರ್‌ವರೆಗೆ ನಾಲೆಯ ಒಳಭಾಗವನ್ನು ಭದ್ರ ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಇನ್ನೂ ನಾವು ನಾಲ್ಕುವರೆ ಲಕ್ಷ ಎಕರೆ ಪ್ರದೇಶಕ್ಕೆ ನೀರನ್ನು ಬಿಡಬೇಕಾಗಿದೆ. ಆಗ ತೊಂದರೆಯಾಗುವುದು ಬೇಡ, ಆದ್ದರಿಂದ ಇದರ ಬಗ್ಗೆ ತಾಂತ್ರಿಕ ವರದಿಯನ್ನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ. ಮತ್ತು ಮಲ್ಲಿಕಾರ್ಜುನ ಖರ್ಗೆಯವರೇನು ವಿಷಯವನ್ನು ಎತ್ತಿದ್ದಾರೆ ಅದರ ಬಗ್ಗೆ ಯುದ್ಧೋಪಾದಿಯಲ್ಲಿ ಕೆಲಸ ಮಾಡಿಸಿ ಆ ಜಾಗವೇನು ಬಿರುಕು ಬಿಟ್ಟಿದೆ ಅದನ್ನು ಸರಿಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಭಾರಿ ನೀರಾವರಿ ಸಚಿವರು ಉತ್ತರ ಕೊಟ್ಟಿರುವುದನ್ನು ನೋಡಿದರೆ ಸಂಪೂರ್ಣವಾಗಿ ಎಪ್ಪತ್ತೆಂಟನೇ ಕಿಲೋಮೀಟರ್‌ವರೆಗೆ ರಿಪೇರಿ ಮಾಡುವುದಾಗಿ ಹೇಳಿದಂತಿದೆ.

ಶ್ರೀ ಕೆ.ಎನ್. ನಾಗೇಗೌಡ:- ಸೊನ್ನೆಯಿಂದ ಎಪ್ಪತ್ತೆಂಟನೆ ಕಿಲೋಮೀಟರ್‌ವರೆಗೆ ಯಾವ್ಯಾವ ಕಡೆಗಳಲ್ಲಿ ನೀರು ಲೀಕ್ ಆಗುತ್ತಿದೆ ಅಂಥ ಕಡೆಗಳಲ್ಲಿ ಮಾತ್ರ ದುರಸ್ತಿ ಮಾಡುವುದಾಗಿ ನಾನು ಹೇಳಿದ್ದು. ತಾವು ಆ ರೀತಿ ಭಾವಿಸಬೇಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಉಪಾಧ್ಯಕ್ಷರೇ, ನಾವು ಇಲ್ಲಿ ಪ್ರಸ್ತಾಪ ಮಾಡಿರತಕ್ಕದ್ದು ಹತ್ತು ವರ್ಷಗಳ ಹಿಂದೆ ಕಟ್ಟಿರುವ ಕೆನಾಲ್ ಬಗ್ಗೆ. ಹತ್ತು ಸಾವಿರ ಕ್ಯೂಸೆಕ್ಸ್ ನೀರನ್ನು ಬಿಡುವ

ಸಾಮರ್ಥ್ಯದ ಕೆನಾಲ್ ಕಟ್ಟಲಾಗಿದ್ದು, ಆದರೆ ಅಲ್ಲಿ ಕೇವಲ ಮೂರು ಸಾವಿರ ಕ್ಯೂಸೆಕ್ಸ್ ನೀರನ್ನು ಬಿಟ್ಟಿರುವಾಗಲೇ ಸೋರಲು ಪ್ರಾರಂಭವಾಗಿದೆ ಎಂದರೆ ಯಾವ ರೀತಿಯಲ್ಲಿ ನಾಲೆಯ ಕೆಲಸವನ್ನು ಮಾಡಿರಬಹುದೆಂದು ತಾವು ಯೋಚನೆ ಮಾಡಿ ಈ ಕೆಲಸವನ್ನು ಮಾಡಿರುವ ಗುತ್ತಿಗೆದಾರರ ಪಟ್ಟಿಯನ್ನು ತರಿಸಿಕೊಂಡು ಕಳಪೆ ಕಾಮಗಾರಿ ಮಾಡಿರುವ ಗುತ್ತಿಗೆದಾರರ ಮೇಲೆ ಕ್ರಮ ತೆಗೆದುಕೊಂಡು ಅವರಿಂದ ಹಣವನ್ನು ವಸೂಲಿ ಮಾಡಿ ಅವರ ಗುತ್ತಿಗೆ ಪರವಾನಗಿಯನ್ನು ರದ್ದು ಪಡಿಸುವ ನಿಟ್ಟಿನಲ್ಲಿ ಸರ್ಕಾರ ಕ್ರಮ ತೆಗೆದುಕೊಂಡಿದೆಯೇ? ಅಂಥ ಒಂದು ಉದಾಹರಣೆ ಇದೆಯೇ? ಮಳೆಗಾಲ ಬಂದರೆ ನೀರನ್ನು ಬಿಡುವ ಕೆಲಸ ಪ್ರಾರಂಭವಾಗುತ್ತದೆ ಬಿಟ್ಟಂಥ ನೀರು ಸೋರುತ್ತದೆ, ಆದ್ದರಿಂದ ರಿಪೇರಿ ಮಾಡಲು ಪ್ರಾರಂಭ ಮಾಡುತ್ತೀರಿ. ಆದ್ದರಿಂದ ಆ ಕಾಮಗಾರಿಯನ್ನು ಮಾಡಲು ಐವತ್ತು ಲಕ್ಷ, ಒಂದು ಕೋಟಿಯನ್ನು ಮಂಜೂರು ಮಾಡಿ ಅಂದು ತಿಂದು ತೇಗಿರುವವರ ಬಗ್ಗೆ ಕ್ರಮ ತೆಗೆದುಕೊಳ್ಳುವ ದಿಟ್ಟ ನಿಲುವನ್ನು ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ. ತಾವು ಆ ರೀತಿ ಕ್ರಮ ತೆಗೆದುಕೊಂಡಿದ್ದೇ ಆದರೆ ಮುಂದೆ ಈ ರೀತಿ ಭ್ರಷ್ಟಾಚಾರವಾಗತಕ್ಕದ್ದು ನಿಲ್ಲುತ್ತದೆ. ಸರ್ಕಾರ ಇದರ ಬಗ್ಗೆ ಗಮನಹರಿಸಬೇಕು. ಆದ್ದರಿಂದ ಹಿಂದೆ ಯಾರ್ಯಾರು ಗುತ್ತಿಗೆದಾರರು ಲೂಟಿ ಮಾಡಿದ್ದಾರೆ ಅಂಥ ಎರಡು ಮೂರು ಗುತ್ತಿಗೆದಾರರ ಮೇಲೆ ಕ್ರಮತೆಗೆದುಕೊಳ್ಳಬೇಕು.

ಶ್ರೀ ಕೆ.ಎನ್. ನಾಗೇಗೌಡ:- ಮಾನ್ಯ ಖರ್ಗೆಯವರು ಎತ್ತಿರುವ ವಿಚಾರದ ಬಗ್ಗೆ ಕೆಲಸ ಯಾವ ರೀತಿಯಲ್ಲಿ ನಡೆಯುತ್ತಿದೆ ಎಂಬ ಬಗ್ಗೆ ಈಗತಾನೆ ಫ್ಯಾಕ್ಸ್ ಸಂದೇಶ ಬಂದಿರುತ್ತದೆ. ಅದೇನೆಂದರೆ 'Repairs to NLBC is nearing completion and is likely to be completed today evening' ಮತ್ತು ವಿರೋಧ ಪಕ್ಷದ ನಾಯಕರೇನು ಹೇಳಿದ್ದಾರೆ, ಸೊನ್ನೆಯಿಂದ ಎಪ್ಪತ್ತೆಂಟನೆ ಕಿಲೋಮೀಟರ್‌ವರೆಗೆ ಎಲ್ಲೆಲ್ಲಿ ನೀರು ಸೋರುತ್ತಿದೆ ಮತ್ತು ತಾಂತ್ರಿಕ ಸಮಿತಿಯವರು ಯಾವ್ಯಾವ ಭಾಗದಲ್ಲಿ ಏನೇನು ಮಾಡಬೇಕೆಂದು ವರದಿ ಕೊಡುತ್ತಾರೆ ಅವೆಲ್ಲವನ್ನು ಓವರ್‌ಆಲ್ ಆಗಿ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇನೆ. ಮತ್ತು ಎಲ್ಲೆಲ್ಲಿ ರಿಪೇರಿ ಮಾಡಬೇಕೆಂದು ಪಟ್ಟಿ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ. ಈಗಲೂ ಇನ್ನೆಲ್ಲಾದರು ಕ್ರಮ ತೆಗೆದುಕೊಳ್ಳಬೇಕಿದ್ದರೆ ತಾವು ಹೇಳಬಹುದು, ಮಾಹಿತಿಯನ್ನು ನೀಡಬಹುದು. ಅದರ ಬಗ್ಗೆ ವಿಚಾರ ಮಾಡುತ್ತೇವೆ.

ಉಪಾಧ್ಯಕ್ಷರು:- ಮಾನ್ಯ ಸದಸ್ಯರುಗಳು ತಂದಿರುವ ನಿಲುವಳಿ ಸೂಚನೆಯನ್ನು ತಿರಸ್ಕರಿಸಲಾಗಿದೆ. ಮಾನ್ಯ ಹಷ್ಮಿಯವರು ಗುಲ್ಬರ್ಗಾ ಬಂದ್ ಬಗ್ಗೆ ಪ್ರಸ್ತಾಪ ಮಾಡಬಹುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಯಾವ ಕಾರಣಕ್ಕಾಗಿ ನಿಲುವಳಿ ಸೂಚನೆಯನ್ನು ತಿರಸ್ಕಾರ ಮಾಡಿದ್ದೀರೆಂದು ದಯಮಾಡಿ ಹೇಳಬೇಕು?

ಉಪಾಧ್ಯಕ್ಷರು:- ಅದರ ಬಗ್ಗೆ ಹೇಳುವ ಅಗತ್ಯವಿಲ್ಲ. ಅವರು ಬಹಳಷ್ಟು ವಿಷಯವನ್ನು ಹೇಳಿದ್ದಾರೆ.

ಶ್ರೀ ಸಯ್ಯದ್ ಜುಲ್ಫೀಕರ್ ಹಷ್ಮಿ:- ಮಾನ್ಯ ಉಪಾಧ್ಯಕ್ಷರೆ, ನಮ್ಮ ಗುಲ್ಬರ್ಗಾದಲ್ಲಿ ಇಂದು ಬಂದ್‌ನ್ನು ಆಚರಿಸುತ್ತಿದ್ದಾರೆ.

(ಗೊಂದಲ)

(ಇ) ಗುಲ್ಬರ್ಗಾದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸುವಂತೆ ಒತ್ತಾಯಿಸಿ ಬೀದರ್ ಬಂದ್.

ಶ್ರೀ ಧರ್ಮಸಿಂಗ್:- ಉಪಾಧ್ಯಕ್ಷರೆ, ಹಷ್ಮಿ ಮತ್ತು ನಾನು ಸೇರಿಯೇ ಗುಲ್ಬರ್ಗಾ ಬಂದ್‌ನ ಬಗ್ಗೆ ವಿಚಾರವನ್ನು ಕಳಿಸಿಕೊಟ್ಟಿದ್ದೆವು. ಇವತ್ತು ಗುಲ್ಬರ್ಗಾದಲ್ಲಿ ಬಂದ್ ಆಚರಿಸುತ್ತಿದ್ದಾರೆ. ಮೊನ್ನೆ ಇಲ್ಲಿ ಕೆಲವು ಶಾಸಕರು ಹುಬ್ಬಳ್ಳಿಯಲ್ಲಿ ಹೈ ಕೋರ್ಟ್ ಪೀಠವನ್ನು ಸ್ಥಾಪನೆ ಮಾಡುವ ಬಗ್ಗೆ ಪ್ರಸ್ತಾಪ ಮಾಡಿದರು. ಗುಲ್ಬರ್ಗಾದಲ್ಲಿ ಮತ್ತು ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಒಂದು ಹೈ ಕೋರ್ಟ್ ಪೀಠವಾಗಬೇಕು ಎನ್ನತಕ್ಕ ಬೇಡಿಕೆ ಬಹಳ ಕಾಲದಿಂದ ಇದೆ. ಇದರ ಬಗ್ಗೆ ಹಿಂದಿನ ಸರ್ಕಾರದಲ್ಲೂ ರೆಸಲ್ಯೂಷನ್ ಪಾಸಾಗಿತ್ತು. ಹುಬ್ಬಳ್ಳಿಯಲ್ಲಿ ಸ್ಥಾಪನೆ ಮಾಡಲು ಉದ್ದೇಶಿಸಿರುವ ಹೈ ಕೋರ್ಟ್ ಪೀಠದ ಬಗ್ಗೆ ನಮ್ಮ ವಿರೋಧವಿಲ್ಲ. ಅದೇ ರೀತಿ ನಮ್ಮ ಗುಲ್ಬರ್ಗಾ, ಹೈದ್ರಾಬಾದ್ ಕರ್ನಾಟಕ ಭಾಗದಲ್ಲೂ ಹೈಕೋರ್ಟ್ ಪೀಠ ಸ್ಥಾಪನೆ ಮಾಡಬೇಕೆಂಬುದು ಆ ಭಾಗದ ಜನರ ಅನಿಸಿಕೆಯಾಗಿದೆ. ಬೀದರ್, ಗುಲ್ಬರ್ಗಾ, ರಾಯಚೂರಿನ ಭಾಗದಲ್ಲಿ ಇದರ ಬಗ್ಗೆ ಚಳುವಳಿ ಪ್ರಾರಂಭವಾಗಿದೆ. ಇವತ್ತು ನೂರಾರು ವಕೀಲರನ್ನು ಬಂಧನ ಮಾಡಿದ್ದಾರೆ, ಅಲ್ಲಿನ ಪೋಲೀಸ್ ಮುಖ್ಯಾಧಿಕಾರಿಗಳ ಜೊತೆ ನಾನು ಸಮಾಲೋಚನೆ ಮಾಡಿದ್ದೇವೆ, ಅಲ್ಲಿ ರಸ್ತೆ ತಡೆಯ ಚಳುವಳಿ ನಡೆಯುತ್ತಿದೆ. ಜಸ್ಟೀಸ್ ಯಶವಂತ್ ಸಮಿತಿಯವರು ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠವಾಗಬೇಕು ಎಂದು ಹೇಳಿದ್ದಾರೆ. ಮಹಾರಾಷ್ಟ್ರದವರು ಹಳೆಯ ಮಹಾರಾಷ್ಟ್ರದ ಭಾಗವಾದ ಹೈದ್ರಾಬಾದ್ ಪ್ರಾಂತ್ಯದ ಔರಂಗಬಾದ್‌ನಲ್ಲಿ ಹೈಕೋರ್ಟ್ ಪೀಠವನ್ನು ಮಾಡಿದ್ದಾರೆ. ಮೊಯ್ಲಿರವರ ಕಾಲದಲ್ಲೂ ಹುಬ್ಬಳ್ಳಿಯಲ್ಲಿ ಹೈಕೋರ್ಟ್ ಪೀಠವನ್ನು ಮಾಡಿ ಗುಲ್ಬರ್ಗಾ, ಬೀದರ್, ರಾಯಚೂರು ಭಾಗಕ್ಕೂ ಅನುಕೂಲವಾಗುವ ರೀತಿಯಲ್ಲಿ ಅಲ್ಲಿನ ಡಿವಿಜನಲ್ ಹೆಡ್ ಕ್ವಾರ್ಟರ್‌ನಲ್ಲಿ ಹೈಕೋರ್ಟ್ ಪೀಠವನ್ನು ಮಾಡಬೇಕೆಂದು ಉದ್ದೇಶವಿತ್ತು. ಈ 11ನೇ ತಾರೀಖಿನಂದು ಎಲ್ಲಾ ವಕೀಲರು ಬೆಂಗಳೂರಿಗೆ ಬರುತ್ತಿದ್ದಾರೆ. ಇವತ್ತು ಅಲ್ಲಿನ ವಕೀಲರು, ಸಾರ್ವಜನಿಕರು ಮತ್ತು ಸುಮಾರು ಆರು ಲಕ್ಷ ಜನಸಂಖ್ಯೆ ಇರುವ ಗುಲ್ಬರ್ಗಾದ ನಾಗರೀಕರು ಚಳುವಳಿಯನ್ನು ಮಾಡುತ್ತಿರುವ ಸಮಯದಲ್ಲಿ, ಸರ್ಕಾರ ಪ್ರಜಾಪ್ರಭುತ್ವದ ಪದ್ಧತಿಯಲ್ಲಿ ಅಂಥ ಚಳುವಳಿಗೆ ಸ್ಪಂದಿಸಬೇಕಾಗುತ್ತದೆ, ಅವರ ಸಮಸ್ಯೆಗಳೇನು ಎಂಬ ಬಗ್ಗೆ ಕೇಳಬೇಕಾಗುತ್ತದೆ. ಇದರ ಬಗ್ಗೆ ಸರ್ಕಾರವೇನು ಮಾಡುತ್ತಿದೆ ಎಂಬ ಬಗ್ಗೆ ಇದುವರೆಗೆ ಕಾನೂನು ಸಚಿವರು ಹೇಳಿಲ್ಲ. ಹೈದರಾಬಾದ್ ಕರ್ನಾಟಕವಾಗಲಿ, ಬಾಂಬೆ ಕರ್ನಾಟಕದ ಭಾಗವಾಗಲಿ ಅಲ್ಲಿ ಹೈಕೋರ್ಟ್ ಪೀಠವನ್ನು ಸ್ಥಾಪನೆ ಮಾಡುವ ಬಗ್ಗೆ ಇದುವರೆಗೆ ಸರ್ಕಾರ ತೀರ್ಮಾನ ಮಾಡುತ್ತಿತ್ತು. ಸರ್ಕಾರ ಹೈಕೋರ್ಟ್‌ನ ನ್ಯಾಯಮೂರ್ತಿಗಳ ಜೊತೆಯಲ್ಲಿ, ಮುಖ್ಯ ನ್ಯಾಯಮೂರ್ತಿಗಳ ಜೊತೆ ಇದರ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ಕೇಂದ್ರದ ಕಾನೂನು ಸಚಿವರ ಜೊತೆ ಸಹ ಸಮಾಲೋಚನೆ